KARNATAKA STATE UNIVERSITIES (SECOND AMENDMENT) BILL, 1977

Motion to consider

2-30 P. M.

SRI S. M. YAHYA (Minister for University Education and Wakfs).- Madam Speaker, I beg to move ;

"That the Karnataka State Universities (Second Amendment) Bill, 1977 be taken into consideration."

MADAM SPEAKAR.— Motion moved :

"That the Karnataka State Universities (Second Amendment) Bill, 1977 be taken into consideration."

SRI S. M. YAHYA.— Madam Speaker, some of the terms are required to be clarified so that the Act can be implemented. Firstly Section 2 the word 'Department'. This word 'Department' is essential in the sense that for the sake of nominating the academic council Senate and other Bodies. The definition of 'Department' implies that those Departments run and managed by the University. There are two Departments, atleast, which are not run and managed by the University-Engineering and Medicine of course Engineering is run and managed by the Bangalore University, but not other two Universities. The Medical Department is not run and managed by any one of the three Universities. So the definition i little modified if any Department is not run and managed by the University, then the Dean of the affiliated college would be deemed to be the person who can be nominated to Senate or Syndicate.

Secondly, Where the Registrar or the Controller of Examinations or the Financial Officer-if these posts are vacant every time the Chancellor has to pass an Order. So, to fillup the vacancy a simpler procedure is adopted. This is done for the administrative convenience. Thirdly, in the case of certain post-graduate departments reasonable representation should be given. According to the Act only 5 Departments have been mentioned. There are one or two more and every Department should get a particular reasonable representation. Therefore, this amendment will help to solve this problem.

Then the Director of Health is not a member of either the Senate or Syndicate or Academic Council He is included. Previously it was thought that the Health University Act will come into force. Therefore his nomination was omitted. Now it is included so that he can be nominated as a member of the Academic Council, Senate or

Syndicate. These are some of the amendments which are necessary for the implementation of the University Act. And an other important point is the question of Librarians. They were all there in the Universities, atleast in two Universities. According to the Act these Librarians will have to vacate, because the new librarians will have to be appointed. But they have entered into services long back and to safeguard their services this amendment is brought in.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷರವರೇ, ಈಗ ಮಾನ್ಯ ಯೂನಿವರ್ಸಿಟಿ ಎಜುಕೇಷನ್ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ತಂದಿರತಕ್ಕ ಕರ್ನಾಟಕ ಯೂನಿವರ್ಸಿಟಿ ಸೆಕೆಂಡ್ ಅಮೆಂಡ್‌ಮೆಂಟ್ ಬಿಲ್ ಏನಿದೆ ಇದನ್ನು ಅವರು ಈ ಸಭೆಯ ಮುಂದೆ ತರತಕ್ಕಂಥಾ ಹಕ್ಕನ್ನು ಕಳೆದುಕೊಂಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದು ಈಗಾಗಲೇ 6 ಸಾರಿ ತಂದಿರತಕ್ಕಂಥಾ ತಿದ್ದುಪಡಿಯಾಗಿದೆ. ಇವರು ಒಂದೊಂದು ಸಾರಿ ಒಂದೊಂದು ತಿದ್ದುಪಡಿಯನ್ನು ತರುತ್ತಿದ್ದಾರೆ. ಒಂದು ಸಾರಿ ಇದರ ಟರ್ಮ್ ಮೂರು ವರ್ಷ. ಈ ಅವಧಿಯಲ್ಲಿ ಯೂನಿವರ್ಸಿಟಿಯ ಬಾಡಿಗಳಾದ ಸೆನೆಟ್, ಸಿಂಡಿಕೇಟ್, ಅಕೆಡಮಿಕ್ ಕೌನ್ಸಿಲ್ ಮತ್ತು ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಕಾನ್‌ಸ್ಟಿಟ್ಯೂಟ್ ಮಾಡುವುದಿಲ್ಲ ಪೂರ್ತಿ ನಾವೇ ಆಡಳಿತ ಮಾಡುತ್ತೇವೆ ಎಂದು ಹೇಳಿದರೆ ಆಗ ಪ್ರಶ್ನೆಯೇ ಬಗೆಹರಿಯುತ್ತದೆ. ಒಂದೊಂದು ಸಾರಿ ಒಂದೊಂದು ತೊಡಕುಗಳು ಬರುತ್ತವೆ. ಹೀಗಾಗಿ ಸುಮಾರು 2 ವರ್ಷಗಳ ಕಾಲ ಯೂನಿವರ್ಸಿಟಿ ಬಾಡಿಗಳು ಫಂಕ್ಷನ್ ಆಗದೇ ಇರುವ ಹಾಗೆ ಮಾಡಿರತಕ್ಕದ್ದು ಬಹಳ ಶೋಚನೀಯ. ಈ ಯೂನಿವರ್ಸಿಟಿಯ ಬಾಡಿಗಳನ್ನು ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಆಗದೆ ಹೋದ ಪಕ್ಷದಲ್ಲಿ ಅದಕ್ಕೆ ಇರತಕ್ಕ ತೊಂದರೆಗಳನ್ನು ಬಗೆಹರಿಸಿಕೊಂಡು ಅವುಗಳನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕಾಗಿತ್ತು. ಅದನ್ನು ಸರಿಮಾಡಿಕೊಳ್ಳದೆ ಈ ರೀತಿ ಅನ್ಯಾಯ ಮಾಡತಕ್ಕದ್ದು ಸರಿಯಾದ್ದಲ್ಲ ಎಂದು ನಾನು ಹೇಳುತ್ತೇನೆ.

ಇನ್ನು ಈಗ ವಿದ್ಯಾರ್ಥಿಗಳ ಸಮಸ್ಯೆ ಇದೆ. ಈಗ ಅವರು ಸೆನೆಟ್‌ಗೆ ಎಲೆಕ್ಷನ್ ಆಗಬೇಕು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇನ್ನು ಮತ್ತೆ ಮುಂದಕ್ಕೆ ಹಾಕುತ್ತಾರೆ. ಹೀಗೆ ನಾನಾ ಕಾರಣಗಳಿಂದ ಈ ಬಾಡಿಗಳನ್ನು ಕಾನ್‌ಸ್ಟಿಟ್ಯೂಟ್ ಮಾಡತಕ್ಕಂಥಾದ್ದನ್ನು ಮುಂದಕ್ಕೆ ಹಾಕತಕ್ಕಂಥಾ ಪರಿಸ್ಥಿತಿ ಇರುವುದರಿಂದ ಇದರಿಂದ ಬಹಳ ಅನಾನುಕೂಲವಾಗುತ್ತದೆ. ಏತಕ್ಕೆಂದರೆ ಈ ರೀತಿ ಸುಮ್ಮನೆ ಯಾವುದೋ ಒಂದು ನೆಪವನ್ನು ಹಾಕಿಕೊಂಡು ಹೋಗುವುದರಿಂದ ಇದು ಮರ್ಯಾದೆ ಇರತಕ್ಕವರಿಗೆ ಯೋಗ್ಯವಲ್ಲ. ಹಿಂದೆ ಇದೇ ಸಭೆಯಲ್ಲಿ ಇನ್ನು ಮುಂದೆ ಇದಕ್ಕೆ ತಿದ್ದುಪಡಿಯನ್ನು ತರುವುದಿಲ್ಲ ಎಂದು ಹೇಳಿದ್ದರು. ಈಗ ಪುನಃ ಅಮೆಂಡ್‌ಮೆಂಟ್ ತಂದಿದ್ದಾರೆ. ಇದನ್ನು ನೋಡಿದರೆ ಇದರ ಬಗ್ಗೆ ಸರ್ಕಾರಕ್ಕೆ ಸೀರಿಯಸ್ ಇದ್ದ ಹಾಗೆ ಕಾಣುವುದಿಲ್ಲ. ಇದರಲ್ಲಿ ಮುಖ್ಯವಾಗಿರತಕ್ಕದ್ದು ಪೋಸ್ಟ್ ಗ್ರಾಜುಯೇಟ್ ರೆಪ್ರೆಜೆಂಟೇಷನ್ ಹೇಗೆ ಬೋರ್ಡ್ ಅಪಾಯಿಂಟ್‌ಮೆಂಟ್, ಲೈಬ್ರರಿಯನ್ಸ್ ಬಗ್ಗೆ ಟೆಂಪರರಿ ಆಫೀಸರ್ಸ್ ಅಪಾಯಿಂಟ್‌ಮೆಂಟ್ ಇವುಗಳ ಬಗ್ಗೆ ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಲೋಪದೋಷಗಳು ಇರುತ್ತವೆ. ಆದರೂ ಕೂಡ ಒಂದಲ್ಲ ಒಂದು ಕಾರಣದಿಂದ ಇದನ್ನು ಮುಂದೆ ಹಾಕತಕ್ಕದ್ದು ಸರಿಯಲ್ಲ ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಖಚಿತವಾಗಿ ಇಷ್ಟು ದಿವಸಗಳೊಳಗಾಗಿ ಯೂನಿವರ್ಸಿಟಿಯ ಬಾಡಿಗಳನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿ. ಅದನ್ನು ಹೇಳಲಿಲ್ಲದೆ ಹೋದರೆ ಖಂಡಿತವಾಗಿಯೂ ನೀವು ತಪ್ಪು ಮಾಡುತ್ತೀರಿ ಎಂದು ತಿಳಿದುಕೊಳ್ಳಬೇಕಾಗುತ್ತದೆ. By 15th of August or some other date I request the Hon. Minister to see that all the bodies are constituted and they are allowed to function. ಇದರ ಬಗ್ಗೆ ಒಂದು ತೀರ್ಮಾನ ಕೊಡದಿದ್ದರೆ ಖಂಡಿತವಾಗಿಯೂ ಕೂಡ ಈ ಬಿಲ್ಲನ್ನು ಮಂಡನೆ ಮಾಡಿದಕ್ಕೆ ಯಾವ ಪ್ರಯೋಜನವೂ ಕೂಡ ಆಗುವುದಿಲ್ಲ. ಇದರಲ್ಲಿ ಒಂದನೆಯದು ಏನಿದೆ "one professor or Director in the Post Graduate Department from each of the faculties shall be a Member" ಎಂದು ಹೇಳಿದ್ದಾರೆ. ಇವುಗಳಿಂದ ಹೇಗೆ ಚೂಸ್ ಮಾಡಿ

ಕೊಳ್ಳಬೇಕು ಎನ್ನುವ ಬಗ್ಗೆ ವಿವರವನ್ನು ಕೊಟ್ಟಿಲ್ಲ. ಮತ್ತು ಡೈರೆಕ್ಟರ್ ಆಫ್ ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್ ಇವರನ್ನು ತೆಗೆದುಕೊಳ್ಳುವುದರಲ್ಲಿ ಏನಾಗಿದೆ ಎಂದರೆ ಡೈರೆಕ್ಟರ್ ಆಫ್ ಹೆಲ್ತ್ ಅಂಡ್ ಫ್ಯಾಮಿಲಿಪ್ಲಾನಿಂಗ್‌ನವರಿಗೆ ಸಾಧಾರಣವಾಗಿ ಹೆಚ್ಚು ಕೆಲಸ ಇರುತ್ತದೆ ಆದ್ದರಿಂದ ಅವರನ್ನು ಇದರಲ್ಲಿ ಸೇರಿಸಿಕೊಳ್ಳುವುದು ಸರಿಯೇ ಎಂಬುದನ್ನು ಯೋಚನೆ ಮಾಡಬೇಕು. ಇದರಲ್ಲಿ ಕಡ್ಡಾಯವಾಗಿ ಕೆಲಸ ಮಾಡಬೇಕು ಎಂದರೆ ಅವರಿಗೆ ಪುರುಸೊತ್ತು ಇರುವುದಿಲ್ಲ. ಆದ್ದರಿಂದ ಅವರನ್ನು ಬಿಡಬೇಕು. "It is further considered necessary to make provision that defect in the Constitution of any of the bodies shal not invalidate the proceedings of such body and to provide for filling up temporary vacancies in the Office of the Registrar, Controller of Examinations or Finance Officer." ಎಂದು ಇದೆ. ಇದು ಒಂದು ಉತ್ತಮವಾದ ಯೋಜನೆ ಎಂದು ಕಾಣುತ್ತದೆ. ಯಾವುದೋ ಒಂದು ಕಾರಣದಿಂದ ಅಪಾಯಿಂಟ್ ಮಾಡುವುದಕ್ಕೆ ಆಗದೇ ಹೋದರೆ ಸಮಗ್ರವಾಗಿ ಕೆಲಸ ನಡೆಯುವುದಕ್ಕೆ ತೊಂದರೆಯಾಗಬಾರದು ಎಂದು ತಂದಿದ್ದಾರೆ. ಕಂಟ್ರೋಲರ್ ಇಲ್ಲದಿದ್ದರೆ ಅರೇಂಜ್ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂದು ಇದನ್ನು ತಂದಿದ್ದಾರೆಂದು ಕಾಣುತ್ತದೆ. ಲೈಬ್ರರಿಯನ್ ಬಗ್ಗೆ ಕೂಡ ಈಗ ಇರುವವರಿಲ್ಲಿ ಅನುಕೂಲ ಮಾಡಿಕೊಡಬೇಕು ಎಂದು ಮಾಡಿದ್ದಾರೆ. ಈಗ ಅಲ್ಲಿರತಕ್ಕವರಿಗೆ ಅರ್ಹತೆ ಇದ್ದಾಗೆ ಅವರನ್ನು ಯಾವ ಕಾರಣದಿಂದ ಕಂಟಿನ್ಯೂ ಮಾಡಬೇಕು ಎನ್ನುವ ಬಗ್ಗೆ ಒರಿಜಿನಲ್ ಆಕ್ಟಿನರೆ ಏತಕ್ಕೆ ಯೋಚನೆ ಮಾಡಿಲ್ಲ ? ಇದರ ಬಗ್ಗೆ ವಿವರವನ್ನು ಹೇಳಿದರೆ ಒಳ್ಳೆಯದು, ಇಷ್ಟು ಹೇಳಿ ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಮಾನ್ಯ ಮಂತ್ರಿಗಳು ಯಾವೊತ್ತಿನ ದಿವಸ ಈ ಯೂನಿವರ್ಸಿಟಿ ಬಾಡಿಗಳು ಕಾನ್‌ಸ್ಟಿಟ್ಯೂಟ್ ಆಗುತ್ತವೆ ಎನ್ನುವುದನ್ನು ಖಚಿತವಾಗಿ ತೀರ್ಮಾನ ಮಾಡದೇ ಹೋದರೆ ಈ ಮಸೂದೆಯ ಬಗ್ಗೆ ವಿಶ್ವಾಸವನ್ನು ಕಳೆದುಕೊಳ್ಳುತ್ತದೆ ಎಂದು ಹೇಳಿ ಈ ಎರಡೆ ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI K. PUTTASWAMY (Chamundeswari).— Madam Speaker, the Hon. Minister who is in charge of University Education and as such in charge of this Bill deserves our atmost sympathy for the akward situation in which he finds himself. This Government has gone on with the exercise of amending the University Act and issuing ordinances throughout this period of five years. If I remember aright, the Mysore University administrative bodies viz. the Senate, the Syndicate and the Academic Council were due for reconstitution in year 1972 itself. Similarly the Karnataka University. but I do not know in which year that was due for reconstitution. Anyway, since 1963-64 this exercise is going on. They extended the life of these existing bodies in December 1974 and thereafter, All these three Universities are not having any representative bodies at all. I do not think the Government can have a parallel example anywhere in this country of running three Universities for very nearly two years without any academic bodies and for running these universities as a department of the Government. This Government seems to be in utter confusion regarding what they have to do in respect of university administration. I am rather tempted to go to the year 1973 itself when the Government with a view to bring a uniform legislation for all these three universities extended the life of the Senate, Syndicate

and other bodies of the Mysore University by one year under the then existing Act. It was hoped that they would be able to bring new legislation in time and see that the university bodies were constituted early. They no doubt brought the legislation, got it referred to a Joint Select Committee. The Joint Select Committee went on deliberating it for quite a long time. They took more than a year to submit a report of the Committee. The Government instead of convening the Assembly and placing the report of the Joint Select Committee before the House resorted to the issue of an ordinance. It is only recentely that we are witnessing the Government using their power of issuing ordinances under the Constitution for any matter big or small. Ordinarilly, if an urgent amendment is required and if the legislature is not in session ordinances are promulgated. But in recent years we are seeing Government making use of power of ordinance even for substantive legislation. I would like the House to frown at such attempts of the Government. I refer to the Karnataka Act VIII of 1974 In this they amended the Bombay Act XX of 1949 under which the Karnataka University was constituted and also the Mysore University Act No. XXIII of 1956 Without taking much time of the House I would read to the House the relevant section :

"Notwithstanding anything contained in Section 45 of the Mysore University Act, 1956, the term of office of the present Mysore members of the Senate, Syndicate, Academic Council, the faculties, the Committee of Finance and the Board of Studies of the University of Mysore shall be deemed to be extended upto and inclusive of the last day of December 1974."

This was passed in April 1974. The time was extended by eight months. By that time already the bodies that existed served the extended period. We were all parties to the passing of this legislation. We hoped against hope that the Government would at least be able to implement their intensions by the end of 1974. They were not able to do so. Then they confronted this House with ordinances. viz, the ordinance No X of 1974 and the ordinance No XIII of 1974. In the ordinance X of 1974 which was issued in November 1974 a reference was made to the deliberations of the Joint Select Committee. I quote :

"Whereas the term of office of the members of the authorities of the Mysore University has been extended by Karnataka and Mysore University Act, 1974 upto and inclusive of the last day of December 1974 and whereas it is considered not desirable to reconstitute the said authorities pending the enactment of the aforesaid Bill, it is therefore

necessary to further extend their term and whereas neither of the Houses of the State Legislature are in session, therefore in exercise of the powers conferred by clause (1) of article 213 of the Constitution of India the Government of Karnataka is pleased to promulgate the following ordinance."

"Not withstanding anything contained in section 45 of the Mysore Act 1956 or section 3 of the Karnataka and Mysore Universities Act 1974 the term of office of the present members of the Senate, Syndicate, Academic Council, the Faculties, the Committees of Finance, and the Board of Studies of Mysore University shall be deemed to be extended upto and inclusive of the last day of December".

They were not able to extend the body of 1974. So, they found it necessary to further extend and issued ordinance 10 of 1974 extending the life of the academic bodies of Mysore University upto and inclusive of the last day of December 1975. What was the urgency for this ordinance? In the intervening period the university had taken steps to reconstitute the bodies and hold elections. The Government did not take steps to bring in an uniform legistation. The Mysore University had taken steps to constitute the bodies and as such the Government had to issue ordinance urgently. But, this ordinance did not also meet the requirements of the situation, and therefore they had to issue another Ordinance No. 13 of 1974. The recital is :

"whereas it is necessary to extend the term of office of certain authorities of the said university till the date of reconstitution of the said authority"

They felt diffident. They were not sure when they would be able to complete all these exercises. Therefore, they resorted to this ordinance. This ordinance empowered the Government to continue the bodies till elections were held under the Mysore University Act of 1956. The relevant section 2 of the ordinance reads as follows :

"Notwithstanding anything contained in section 3 of the Karnataka and Mysore Universities Act 1974 except in so far as it relates to the academic council of the Mysore University, the term of office of the present members of the Senate, the Syndicate, the Faculties, the Committee of Finance and the Board of Studies of the University of Mysore shall be deemed to be extended till the said bodies are constitute in accordance with the provisions of the Mysore University Act 1956."

Madam Speaker, I would like to ask one thing. The elections were due in 1972 or early part of 1973 The Government should have taken steps to allow the university to take steps to hold the elections and complete the elections. They failed to do so They went on till 1974 and in December 1974 they said that these bodies will continue till such time as elections are held under section 45 of the Mysore University Act 1956. They allowed these bodies to function beyond the term for which they were elected for nearly 3 years. This Ordinance 10 as also not replaced because it was not needed. They rushed through ordinances and this was not replaced. Only the ordinance 13 of 1974 was replaced by the Karnataka Act 7 of 1975. Here they have repealed the ordinance No. 10. Then they thought that they had wasted time nearly 3 years without doing anything. So they thought that they must rush through and promulgated an ordinance repealing the Karnatak University Act and also Mysore University Act of 1956 by a uniform legislation for all the three universities. It is perhaps 20 months and till now elections are not complete. The university bodies have not come into existence. Madam Speaker I do not know why the Hon'ble Minister in charge of the Bill did not explain the implication of clause 9 of the Bill. Now the universities are confronted with a situtiou. As far as I know they have been able to complete elections to the university bodies. Recently even the Government have exercised their powers of nomination and nominated to the bodies but they have not been able to nominate the representatives of the students.

SRI S. M. YAHYA.— They have been nominated already. I am bringing an amendment Bill.

SRI K. PUTTASWAMY.— There was an amendment and it empowered to nominate. Am I to take that the bodies are not fully constituted?

SRI S. M. YAHYA.— There is a legal lacuna. As it is, it is fully constituted but the engineering and medical departments will not get representation according to the Act. The university consists of Arts, Science, Commerce, Engineering and Medical. Unless the definition of department is modified we cannot give representation to engineering and medical faculties because the departments are not run and managed by the universities.

SRI K. PUTTASWAMY.— The Hon'ble Minister has not explained to us clause 9, substitution of new section for section 64. What exactly is in his mind, I want to know.

3-00 P. M.

Clause 9 seeks to substitute a new section for Section 64. It says :—

"64 ACTS AND PROCEEDINGS NOT INVALIDATED, MERELY ON THE GROUND OF DEFECT IN CONSTITUTION, VACANCY, ETC, (1) Notwithstanding that the Senate, the Syndicate or the Academic Council or any other authority or body of the University is not duly constituted or there is a defect in its constitution or reconstitution at any time and notwithstanding that there is a vacancy in the membership of any such authority or body, no act or proceeding of such authority or body shall be invalidated merely on any such grounds."

I understand the necessity for this Section. except the phrase "not duly constituted". When the body is not duly constituted, how can we say that whatever that body does should not be invalidated. If there is a defect or an irregularity, I can understand. When the body itself is not duly constituted, then that irregularity cannot be cured by this section.

SRI S. M. YAHYA.—As it is, these bodies could not be constituted fully because of some legal lacuna or otherwise. Reconstitution is quite different from constituting all these academic bodies for the first time. If any one category is not represented, it is not fully or duly constituted. It is possible that a section or a category is not represented, I must say that this is a precautionary section, because even tomorrow if we find that a particular category is not represented, then in the eyes of law this will be fully constituted.

SRI K. PUTTASWAMY.—That only shows that the clarification given by the Hon'ble Minister proves the genuiness of my argument. that even today they are not clear in their mind. Therefore, as a matter of abundant caution they have resorted to the clause if the body is not duly constituted and they transact business, it should not be validated.

SRI S. M YAHYA.—We do not want further delay in this matter.

SRI K. PUTTASWAMY.—That has been the burden of my song all through. They have not been able to bestow sufficient thought on these things and they are simply trying to do something to meet the situation and are getting themselves placed in a very embarassing position.

Now, this is the second amendment that they have brought the first amendment was brought sometime back. Even then, I am not sure that they would usher in all these bodies into existence. I have no comments with regard to clauses 2, 3 4, 5, 6 and even 7. But, regarding Clause 8 I would like to say a few words. Clause 8 seeks to amend Section 50. Section 50 of the University Act deals with appointment of non-ministerial staff. In the University the appointments of professors, readers, and lecturers are entrusted to Boards to be formed for that purpose, and as far as appointments of ministrial staff is concerned it has been entrusted to the Public Service Commission. We know that Government have recently appointed several Committees for making appointments to ministrial jobs to almost all the Departments. When they have thought of entrusting this responsibility of appointmants of ministerial staff to the Public Service Commission, I am told subject to correction that though it is over 1½ yeaes, the Public Service Commission, have not been able to appoint any ministerial staff at all. The Universities, I am told, are handicapped for want of sufficient hands. I would like to ask the Government whether they could not entrust the Vice Chancellors or the Registrar and other academic bodies to make these appointments, and whether they could not have allowed appointment of some Committee by the Syndicate and the Vice Chancellor to discharge the responsibility of appointment of Clerks. We know that the Public Service Commission is overburdned with the work and they have not been able to help tne University in providing the ministerial staff in time and therefore the work ffered, Even now, I would like to request the Government to consider the desirability of amending Section 50 suitably. As for as Section 50, which is sought to be amended now for appointment of non-minustrial staff is concerned, this Act as provided a Board of Appointments consisting of Vice Chanoellor Registrar, one person working in that particular section and two persons to be nominated by the Chancellor-not by the Vice Chancellor, not by the Syndicate and not by the Senate, but two persons to be appointed by the Chancellor for appointment of non-ministerial staff. Virtually, the Vice-Chancellor, the Registrar and all these bodies are not even given power to appoint persons to non-ministerial staff. Again, they have found it necessary to amend this section also by making a very minor change. I do not want to comment on that. Anyway I would like the Government to ponder over whether they could not entrust this responsibility to be discharged by the Vice-Chancellor. A Vice-Chancellor of a University will not have power to appoint even a Peon. That is the situation in which the Vice-Chancellors are placed. I am told that they are now in a

position to see that all the University bodies come into existence and function. It has taken five long years as far as Mysore University is concerned. It is a great pity that the Government took much of time to see that a uniform legislation for Universities was enacted and under the new Act elections held.

At least even now I would like the Government to take expeditious steps to see that the other problems which remain unsolved are resolved. With these remarks I would reluctantly say that we have to agree for these things ; otherwise the Universities are in a big quandry, It is not with pleasure that I give my consent to these amendments but I do so with the hope that the Government will now atleast carry on the dialogue with the Vice-Chancellors and try to know their difficulties and see that suitable amendments are effected for the uniform legislation.

† ಶ್ರೀ ಸಿ. ಬೈರೇಗೌಡ (ವೇಮಗಲ್).— ಮಾನ್ಯ ಅಧ್ಯಕ್ಷರೇ, ಈದಿವಸ ವಿಶ್ವವಿದ್ಯಾನಿಲಯಗಳ ಸಚಿವರು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆಗೆ ಎರಡನೆಯ ತಿದ್ದುಪಡಿಯನ್ನು ತರುತ್ತಿದ್ದಾರೆ ಈ ಕಾನೂನು ಸಭೆಯಲ್ಲಿ ಚರ್ಚೆಯಾದಾಗ ನಮ್ಮಲ್ಲಿ ಅನೇಕರು ಅನೇಕ ಅನುಮಾನಗಳನ್ನು ವ್ಯಕ್ತಪಡಿಸಿದರು. ಆ ಎಲ್ಲಾ ಅನುಮಾನಗಳು ಈಗ ನಿಜವಾಗುತ್ತಾ ಬಂದಿವೆ. ಇದು ಕಾನೂನಾಗಿ ಒಂದು ವರ್ಷಮೇಲ್ಪಟ್ಟರೂ ಸಹ ಇಲ್ಲಿಯವರೆಗೆ ಕರ್ನಾಟಕ ಮೂರು ವಿಶ್ವವಿದ್ಯಾನಿಲಯಗಳಲ್ಲಿ ಅತಿ ಮುಖ್ಯವಾದಂಥ ಅಂಗಗಳಾದ ಸೆನೆಟ್ ಸಿಂಡಿಕೇಟ್ ಮತ್ತು ಅಕಡೆಮಿಕ್ ಕೌನ್ಸಿಲ್‌ಗಳು ಇನ್ನೂ ಸಹ ಕಾನ್‌ಸ್ಟಿಟ್ಯೂಟ್ ಆಗಿಲ್ಲ. ದೇಶದಲ್ಲಿ ಯಾವ ರೀತಿಯಲ್ಲಿ ಸರ್ವಾಧಿಕಾರ ಮನೋಭಾವದಿಂದ ಸರ್ಕಾರವನ್ನು ನಡೆಸಿಕೊಂಡು ಬಂದರೋ ಅದೇ ರೀತಿಯಲ್ಲಿ ವಿಶ್ವವಿದ್ಯಾನಿಲಯಗಳಲ್ಲಿಯೂ ಸಹ ಸರ್ವಾಧಿಕಾರವನ್ನು ನಡೆಸಿಕೊಂಡು ಬರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದರ ಜೊತೆಗೆ ಇವತ್ತಿನ ದಿವಸ ಸದನದ ಸದಸ್ಯರು ಮತ್ತು ವಿದ್ಯಾರ್ಥಿಗಳು ಅವರ ಪ್ರತಿನಿಧಿಗಳು ವಿಶ್ವವಿದ್ಯಾನಿಲಯದ ಆಗುಹೋಗುಗಳಲ್ಲಿ ಹೆಚ್ಚು ಆಸ್ತೆ ವಹಿಸಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ ಈ ಮೂರು ಅಂಗಗಳು ಇದ್ದಿದ್ದರೆ ವಿಶ್ವವಿದ್ಯಾನಿಲಯ ಸರಿಯಾಗಿ ಕೆಲಸ ಮಾಡುತ್ತಿತ್ತು ಎಂದು ನಾನಾದರೂ ಹೇಳಬಯಸುತ್ತೇನೆ. ಇವುಗಳಿಗೆ ಸರ್ಕಾರದವರು ನಾಮಿನೇಷನ್ ಮಾಡುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈ ರೀತಿಯಾಗಿ ಸರ್ಕಾರದವರು ಇವುಗಳಿಗೆ ನಾಮಿನೇಷನ್ ಮಾಡತಕ್ಕದ್ದು ಉಚಿತವಲ್ಲ ಈ ರೀತಿಯಾಗಿ ನಾಮಕರಣ ಮಾಡುವುದಕ್ಕೆ ವಿದ್ಯಾರ್ಥಿಗಳ ವಿರೋಧ ರಾಜ್ಯದಾದ್ಯಂತ ಇದೆ. ಆದ್ದರಿಂದ ಸರ್ಕಾರದವರು ಇವುಗಳಿಗೆ ನಾಮಿನೇಷನ್ ಮಾಡತಕ್ಕದ್ದನ್ನು ತೆಗೆದು ಚುನಾವಣೆಗಳನ್ನು ನಡೆಸುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿರತಕ್ಕದ್ದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ ಸರ್ಕಾರದವರಿಗೆ ನಿಜವಾಗಿಯೂ ವಿಶ್ವವಿದ್ಯಾನಿಲಯಗಳಲ್ಲಿ ಸರ್ವಾಧಿಕಾರ ತೊಲಗಬೇಕು ಅಲ್ಲಿ ಪ್ರಜಾಪ್ರಭುತ್ವದ ತತ್ವದ ಮೇಲೆ ಆಡಳಿತ ನಡೆಯಬೇಕು ಎನ್ನುವ ಇಚ್ಛೆ ಇದ್ದರೆ ಈ ಕಾನೂನಿಗೆ ಅಮೂಲಾಗ್ರವಾದ ಬದಲಾವಣೆಗಳನ್ನು ತರುವುದಕ್ಕೆ ಸಾಧ್ಯತೆಇತ್ತು. ಇವರು ಇದು ಯಾವುದನ್ನೂ ಕೂಡ ಮಾಡಲಿಲ್ಲ. ಇವತ್ತು ವಿಶ್ವವಿದ್ಯಾನಿಲಯಗಳ ವೈಸ್‌ಛಾನ್ಸೆಲರ್ ಅವರು ಇದ್ದಾರೆ, ಅವರನ್ನು ಕರೆದು ಅವರ ಕಷ್ಟ ಏನು ಎನ್ನುವುದನ್ನು ಸರ್ಕಾರದವರು ತಿಳಿದುಕೊಳ್ಳಬೇಕು. ನಾವು ಅವರೊಂದಿಗೆ ಖಾಸಗಿಯಾಗಿ ಮಾತನಾಡಿದಾಗ ಅವರು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿದ್ದರು. ಆದರೆ ಈ ಒಂದು ಕಾನೂನಿನ ಆಧಾರದ ಮೇಲೆ ಅವರು ತಮ್ಮ ಮನಸ್ಸಿಗೆ ತೃಪ್ತಿಯಾಗಿ ಕೆಲಸ ಮಾಡುವುದಕ್ಕೂ ಸಾಧ್ಯವಿಲ್ಲ. ಪ್ರತಿಯೊಂದುಹಂತದಲ್ಲಿಯೂ ಕೂಡ ಅವರಿಗೆ ಯಾವ ಒಂದು ಅಧಿಕಾರವೂ ಇಲ್ಲ. ಅವರಿಗೆ ಸ್ವಲ್ಪವಾದರೂ ಅಧಿಕಾರ ಇರಬೇಕು. ಎಲ್ಲದಕ್ಕೂ ಅವರು ಸೆನೆಟ್, ಸಿಂಡಿಕೇಟ್, ಮತ್ತು ಅಕಡೆಮಿಕ್ ಕೌನ್ಸಿಲ್ ಮೇಲೆ ಅವಲಂಬಿಸಬೇಕಾಗಿದೆ. ಆದ್ದರಿಂದ ಅವರಿಗೆ ಯಾವರೀತಿಯ ಅನುಭವ ಇದೆ, ಅದನ್ನು ಉಪಯೋಗಿಸಿಕೊಂಡು

ಯಾವರೀತಿಯ ಕಾನೂನನ್ನು ಮಾಡಬೇಕು ಎನ್ನುವಂಥ ಆಸಕ್ತಿಯೂ ಕೂಡ ಸರ್ಕಾರದವರಿಗೆ ಇಲ್ಲ ಸರ್ಕಾರದವರಿಗೆ ಮೆಜಾರಿಟಿ ಇದೆಯೆಂದು ಪ್ರತಿಯೊಂದು ಹಂತದಲ್ಲಿಯೂ ಕೂಡ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಹಸ್ತಕ್ಷೇಪ ಇರಬೇಕೆಂದು ಕೆಲಸ ಮಾಡಿಕೊಂಡಿದ್ದಾರೆ. ವೈಸ್ ಚಾನ್ಸಲರ್ ಅವರು ಕೆಲಸ ಮಾಡುವಾಗ ಹೆಜ್ಜೆ ಹೆಜ್ಜೆಗೂ ಸರ್ಕಾರದವರ ಪ್ರಭಾವಕ್ಕೆ ಒಳಗಾಗಿ ಕೆಲಸ ಮಾಡಬೇಕು ಎನ್ನುವ ಅಭಿಪ್ರಾಯ ಸ್ಪಷ್ಟವಾಗಿ ಈ ತಿದ್ದುಪಡಿಯನ್ನು ತಂದಿರುವುದರಿಂದ ಗೊತ್ತಾಗುತ್ತಿದೆ.

ಮತ್ತೆ ಕ್ಲಾಸ್—2ರಲ್ಲಿ ಕೊಟ್ಟಿರತಕ್ಕ ಡೆಫಿನೇಷನ್ ಸರಿಯಾಗಿಲ್ಲ. ಇದರ ಉದ್ದೇಶ ಇನ್ನೂ ಹೆಚ್ಚಿನದಾಗಿರಬೇಕು. ಇದರ ವ್ಯಾಪಕತೆ ಹೆಚ್ಚಬೇಕು ಎಂದು ಇದಕ್ಕೆ ತಿದ್ದುಪಡಿ ತರುವುದಕ್ಕೆ ಹೊರಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಮತ್ತೆ ಇದಕ್ಕೆ ಇವರು ತಿದ್ದುಪಡಿಯನ್ನು ತರುತ್ತಾರೆಂದು ಹೇಳುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೆಂಟರ್ ಫಾರ್ ಸೈಂಟಿಫಿಕ್ ಸ್ಟಡೀಸ್ ಇನ್ ಸೋಷಿಯಲಿಸಂ ಎನ್ನುವುದು ಇದೆ. ಇದು ಡಿಪಾರ್ಟ್‌ಮೆಂಟ್ ಆಗುತ್ತದೆಯೋ ಅಥವಾ ಫಕಲ್ಟಿ ಆಗುತ್ತದೆಯೋ ಗೊತ್ತಿಲ್ಲ. ಇದರ ಸ್ಥಾಪನೆಯಾಗಿ ಮೂರು ನಾಲ್ಕು ವರ್ಷಗಳಾಗಿದ್ದರೂ ಕೂಡ ಇಲ್ಲಿಯವರೆಗೆ ಇದು ಯಾವ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ ಇದರ ಅರ್ಥ ಏನು ಎನ್ನುವುದು ಕೂಡ ವಿವರವಾಗಿ ಇಲ್ಲ. ಈ ತರಹದ ಕೇಂದ್ರಗಳು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಆಗಬಹುದು. ನಾಳೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಗಬಹುದು, ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಆಗಬಹುದು. ಆದರೆ ನಮಗಿರತಕ್ಕ ಅನುಭವದ ಮೇಲೆ ನೋಡುವುದಾದರೆ, ಇದರ ಡೆಫಿನೇಷನ್ ಈಗ ತಂದಿರತಕ್ಕ ತಿದ್ದುಪಡಿಯಲ್ಲಿಯೂ ಕೂಡ ಇಲ್ಲ ಈ ಎಲ್ಲಾ ಅಂಶಗಳನ್ನು ಸರ್ಕಾರದವರು ಗಮನಿಸಿ ಈ ತಿದ್ದುಪಡಿಯನ್ನು ತಂದಿದ್ದರೆ ಸಾಧುವಾಗುತ್ತಿತ್ತು ಎನ್ನುವ ಒಂದು ಸಮಸ್ಯೆ ನಮಗೆ ಬರುತ್ತದೆ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ವಿಶ್ವವಿದ್ಯಾನಿಲಯಗಳ ವೈಸ್‌ಚಾನ್ಸಲರ್ಸ್‌ನ್ನು ಕರೆದು, ಅವರ ನಿಜವಾದ ಸಮಸ್ಯೆಗಳು ಏನು ಇವೆ, ಅವರು ಪ್ರತಿನಿತ್ಯದ ಆಡಳಿತವನ್ನು ನಡೆಸಬೇಕಾದರೆ ಯಾವ ರೀತಿಯ ಅನುಕೂಲತೆಗಳು ಬೇಕು ಎಂದು ಅವರ ಅನುಭವವನ್ನು ತೆಗೆದುಕೊಂಡು ಈ ತಿದ್ದುಪಡಿಯನ್ನು ತಂದಿದ್ದರೆ ಅದು ಸಮರ್ಪಕವಾಗಿರುತ್ತಿತ್ತು, ಇಲ್ಲದೇಹೋದರೆ ಇದು ಸರ್ವಾಧಿಕಾರತ್ವವನ್ನು ವಿಶ್ವವಿದ್ಯಾನಿಲಯಗಳಲ್ಲಿ ಮುಂದುವರಿಸುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ .—(ಮಲ್ಲೇಶ್ವರಂ) ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ವಿದ್ಯಾಸಚಿವರು ಮಂಡಿಸಿರುವ ಈ ಮಸೂದೆಯ ಬಗ್ಗೆ ಹಲವಾರು ವಿಷಯಗಳನ್ನು ಈಗಾಗಲೇ ಮಾನ್ಯ ಪುಟ್ಟಸ್ವಾಮಿಯವರು ಇತರರು ಹೇಳಿದ್ದಾರೆ ನನಗಾದರೂ ಮೊದಲನೆಯದಾಗಿ ಕಂಡುಬರುವುದು ಏನೆಂದರೆ, ಈ ತರಹದ ತಿದ್ದುಪಡಿಯನ್ನು ತೆಗೆದು ಕೊಂಡು ಬರುವಂಥ ಔಚಿತ್ಯ ಸರ್ಕಾರದವರಿಗೆ ಇತ್ತೇ ಎನ್ನುವುದು. ಏಕೆಂದರೆ, ಕರ್ನಾಟಕ ಯೂನಿವರ್ಸಿಟಿ ಆಕ್ಟನ್ನು ನಾವು ನೋಡುವುದಾದರೆ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ, ಅನೇಕ ಅಂಶಗಳು ಈದಿವಸ ಇದರಲ್ಲಿ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿದೆ. ಮತ್ತು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಯಾವರೀತಿಯಲ್ಲಿ ನಡೆಯಬೇಕು ಎಂದು ನಾವು ಯಾರನ್ನಾದರೂ ವಿದ್ಯಾ ಪರಿಣಿತರನ್ನು ಆಗಲಿ ಕೇಳಿದರೆ ಅವರ ಅಭಿಪ್ರಾಯವೇ ಬೇರೆಯಾಗಿರುತ್ತದೆ. ಕೇಂದ್ರದ ವಿದ್ಯಾಮಂತ್ರಿಗಳಾಗಿದ್ದ ಪ್ರೊಫೆಸರ್ ನೂರಲ್ ಹಸನ್ ಅವರು, ಪ್ರೊಫೆಸರ್ ರಾಧಾಕೃಷ್ಣನ್ ಅವರು ಮತ್ತು ಇತರರು ವಿಶ್ವವಿದ್ಯಾನಿಲಯಗಳ ಬಗ್ಗೆ ಮಾತನಾಡಿ ಇವುಗಳಲ್ಲಿ ಪೂರ್ಣವಾಗಿ ಪ್ರಜಾಪ್ರಭುತ್ವದ ಆಧಾರದ ಮೇಲೆ ನಡೆಯಬೇಕು, ಆದಷ್ಟು ಮಟ್ಟಿಗೆ ಇವುಗಳಲ್ಲ ಸರ್ಕಾರದ ಹಸ್ತಕ್ಷೇಪ ಇರಕೂಡದು ಸರ್ಕಾರದವರು ಮಧ್ಯೆ ಮಧ್ಯೆ ಪ್ರವೇಶ ಮಾಡಕೂಡದು ಎನ್ನುವುದನ್ನು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಕಲ್ಕತ್ತ ವಿಶ್ವವಿದ್ಯಾನಿಲಯದವರಾಗಲೀ ಮತ್ತು ಬಾಂಬೆ ವಿಶ್ವವಿದ್ಯಾನಿಲಯದವರಾಗಲೀ ಇದೇ ಪ್ರಕಾರವಾಗಿ ತಮ್ಮ ಆಡಳಿತವನ್ನು ನಡೆಸಿಕೊಂಡು ಬರುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ ಎಂದು ಅವುಗಳ ಆಕ್ಟನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ. ನಮ್ಮ ಕರ್ನಾಟಕ ವಿಶ್ವವಿದ್ಯಾನಿಲಯಗಳ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಚರ್ಚೆಯಾಗಿ ಬಂದಿದೆ. ಇದರ

ಬಗ್ಗೆ ನಾನು ಹೆಚ್ಚಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಆದರೂ ಸಹ ಅನೇಕ ಅಂಶಗಳು ನಮಗೆ ಕಂಡ ರೀತಿಯಲ್ಲಿ ಇದನ್ನು ಪುನರ್ ಆಲೋಚನೆ ಮಾಡಬೇಕಾದಂಥ ಪರಿಸ್ಥಿತಿ ಅನ್ನಿಸುತ್ತದೆ.

ಉದಾಹರಣೆಗೆ ಇದರ ಒರಿಜಿನಲ್ ಆಕ್ಟಿನಲ್ಲಿ ನೋಡಿದರೆ ಅನೇಕ ಕಾನೂನುಗಳು ಇವೆ. ಅದರಲ್ಲಿ ಒಂದೆರಡು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಅದರಲ್ಲಿ ಕ್ಲಾಸ್ 36ರಲ್ಲಿ ಈ ರೀತಿ ಇದೆ.

> "Stututes making: (4) Every statute passed shall be submitteed to the Chancellor through the State Government for assent. The Chancellor may give or withhold his assent thereto or refert back to the Senate for further consideration. (5) No statute passed by the Senate shall have validity until aasented to by the Chancellor".

ಈ ಒಂದು ಕ್ಲಾಸ್ ಇದೆ ಇದರಲ್ಲಿ ಏನಾಗುತ್ತದೆ ಎಂದರೆ ಯಾವುದಾದರೂ ಒಂದು ಸ್ಟ್ಯಾಚೂಟ್‌ಗೆ ಒಪ್ಪಿಗೆ ಪಡೆಯಬೇಕಾದರೆ ಸರ್ಕಾರದಿಂದ ಮೊದಲು ಸಲಹೆ ಪಡೆಯಬೇಕು, ಮೊದಲು ಅವರ ಅಭಿಪ್ರಾಯ ಪಡೆಯಬೇಕು. ಅನಂತರ ಅದು ವೈಸ್‌ಛಾನ್ಸಲರ್‌ಗೆ ಹೋಗಿ ವೈಸ್‌ಛಾನ್ಸಲರ್ ಅದನ್ನು ಒಪ್ಪಿಕೊಂಡರೆ ಮಾತ್ರ ಆ ಸ್ಟ್ಯಾಚೂಟ್ ಜಾರಿಗೆ ಬರುತ್ತದೆ. ಇಲ್ಲದಿದ್ದರೆ ಅದು ಜಾರಿಗೆ ಬರುವುದಿಲ್ಲ. ಈ ತರಹ ಒಂದು ಕ್ಲಾಸ್ ಬಾಂಬೆ ಯೂನಿವರ್ಸಿಟಿಯಲ್ಲಾಗಲಿ ಅಥವಾ ವೆಸ್ಟ್ ಬೆಂಗಾಲ್ ಯೂನಿವರ್ಸಿಟಿಯಲ್ಲಾಗಲಿ ಅವರ ಆಕ್ಟ್‌ನಲ್ಲಿ ಇಟ್ಟುಕೊಂಡಿಲ್ಲ. ಪೂರ್ತಾ ಅಧಿಕಾರವನ್ನು ಅವರಿಗೇ ಕೊಟ್ಟಿದ್ದಾರೆ. ಅದರಲ್ಲಿ ಸರ್ಕಾರದ ಇಂಟರ್‌ಫಿಯರೆನ್ಸ್ ಇಲ್ಲವೇ ಇಲ್ಲ. ಅದರಂತೆ ನೀವೂ ಒಂದು ಕ್ಲಾಸ್ ಅನ್ನು ಇಡಿ.

ಇನ್ನು ಈ ಆಕ್ಟ್‌ನ ಪೇಜ್ 34ರಲ್ಲಿ ಕ್ಲಾಸ್ 38 (6) ರಲ್ಲಿ ಏನು ಇದೆ ಅನ್ನುವುದನ್ನು ಇನ್ನೊಂದು ಉದಾಹರಣೆ ಹೇಳುತ್ತೇನೆ. ಅದು ಈ ರೀತಿ ಇದೆ.—

> 'The Chancellor may after obtaining through the State Government, the comments of the Syndicate, either reject the appeal or approve the Ordinance as proposed by the Academic Council. Thereupon, the Ordinance shall have effect as if made by the Syndicate."

So, even if the Syndicate passes an ordinance, it won't be accepted straight away unless the Government accepts it. After all the Syndicate is not supposed to be consisting of ordinary personalities. Even according to the Act itself the Syndicate consists of persons of eminence viz., the Vice Chacellihor, the Director of Collegiate Education, the Director of Technical Education, Principals of three Colleges. Three persons, none of whom being an employee of the University or an affiliated college or representative of students elected by the Senate from among its members: One Professor of post-graduate studies by rotation according to seniority, nominated by the Chancellor for a period of one year; and one person elected by the Academic Council etc.,

ಇದರಿಂದ ಏನಾಗುತ್ತದೆ ಎಂದರೆ ಯಾರು ಯಾರು ಈ ಪೊತ್ತಿನ ದಿವಸ ಪರಿಣತರು ಇದ್ದಾರೆ ವೈಸ್ ಛಾನ್ಸಲರ್, ಪ್ರೊಫೆಸರ್ಸ್ ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಅವರು ಇನ್ನು ಯಾರು ಯಾರು ಪರಿಣತರು ಇದ್ದಾರೆ ಅಂಥಾವರು ಮಾಡಿದಂಥಾ ಸ್ಟ್ಯಾಚೂಟ್ ಅನ್ನು ಈ

ಒಂದು ಶಾಸನದ ರೀತ್ಯಾ ತಳ್ಳಿಹಾಕಬಹುದು ಎಂದು ನನಗಾದರೂ ಅನಿಸುತ್ತದೆ. ನಾನು ಇದರ ಬಗ್ಗೆ ಒಂದು ಮೂಲಭೂತವಾಗಿ ಇರುವಂಥಾ ಒಂದು ನಿದರ್ಶನ ಹೇಳಿದರೂ ಕೂಡ, ಈ ತಿದ್ದುಪಡಿ ಮಸೂದೆಗೂ ಇದಕ್ಕೂ ನೇರವಾಗಿ ಸಂಬಂಧ ಇಲ್ಲದೇ ಇರಬಹುದು. ಅಂತ ತಾವು ಆರೀತಿ ಆಕ್ಷೇಪಣೆ ಮಾಡಬಹುದು. ಆದುದರಿಂದ ತಾವು ಈ ಒಂದು ತಿದ್ದುಪಡಿ ಮಸೂದೆಯನ್ನು ತೆಗೆದುಕೊಂಡು ಬರುವುದಕ್ಕೆ ಮುಂಚೆ ಒಂದು ಸಾರಿ ಪುನಾಲೋಚನೆ ಮಾಡಬೇಕು. ಇದರಲ್ಲಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಅಂಶಗಳು ಏನು ಇವೆ ಅನ್ನುವುದಾಗಲಿ ಅಥವಾ ಯೂನಿವರ್ಸಿಟಿಗೆ ಧಕ್ಕೆ ಬರುವಂಥಾ ಅಂಶಗಳು ಏನು ಇವೆ ಅನ್ನುವುದಾಗಲಿ ತಿಳಿದುಕೊಳ್ಳಬೇಕು. ಅಷ್ಟೇ ಅಲ್ಲದೆ ಅವರನ್ನು ಸ್ವಾಯುತ್ತತೆಯಿಂದ ರಕ್ಷಣೆ ಮಾಡತಕ್ಕಂಥಾದ್ದು ಮತ್ತು ಇದರಲ್ಲಿ ಒಳ್ಳೆಯ ವಿದ್ಯಾಭ್ಯಾಸ, ಒಳ್ಳೆಯ ಶಿಕ್ಷಣ ಕೊಡುವುದಕ್ಕೆ ಯಾವರೀತಿಯಾದ ಅಂಶಗಳು ಇವೆ ಅನ್ನುವುದನ್ನು ತಿಳಿದುಕೊಂಡು ಈ ಬಗ್ಗೆ ಒಂದು ತಿದ್ದುಪಡಿ ಮಾಡಬೇಕೇ ವಿನಾ ಇದು ಟೆಕ್ನಿಕಲ್ ವಿಷಯ ಅಂತ ತಿಳಿದುಕೊಂಡು ಇದಕ್ಕೆ ಒಂದು ಮಸೂದೆಯನ್ನು ತೆಗೆದು ಕೊಂಡು ಬರುವುದು ಸೂಕ್ತವಲ್ಲ ಎಂದು ನಾನು ಹೇಳಬೇಕಾಗಿದೆ. ಈ ಬಗ್ಗೆ ತಮಗೆ ಹೇಳಬೇಕಾದರೆ ಈ ಯೂನಿವರ್ಸಿಟಿ ಒಂದು ಮೇಸ್ ತರಹ ಆಗಿದೆ ಅಂತ ಹೇಳಬಹುದು ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಮಾನ್ಯ ಸದಸ್ಯರಾದ ಶ್ರೀ ಬಿ. ವಿ. ಕಕ್ಕಿಲಾಯ ಅವರು ಮೈಸೂರು ಯೂನಿವರ್ಸಿಟಿ ಸೆನೆಟ್‌ನಲ್ಲಿ ಇದ್ದರು ಆದರೆ ಆ ಸೆನೆಟ್ ಒಂದು ಸಾರಿಯೂ ಸೇರಲಿಲ್ಲಾ, ಈ ವಿಷಯವಾಗಿ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಹೇಳಿದ್ದಾರೆ. ಇದಕ್ಕೆ 5–6 ಸಾರಿ ಎಕ್ಸ್‌ಟೆನ್‌ಷನ್ ಕೊಟ್ಟುಕೊಂಡು ಬಂದಿರಿ. ಇದರಿಂದ ಚುನಾಯಿತ ಪ್ರತಿನಿಧಿಗಳು ಬರುವುದಕ್ಕೆ ಅವಕಾಶ ಇಲ್ಲದೇ ಇದ್ದ ಹಾಗೆ ಆಯಿತು, ಅವರು ಏನು ಹೇಳುವುದಕ್ಕೂ ಕೂಡ ಅವಕಾಶ ಇಲ್ಲದೇ ಇರುವುದರಿಂದ ಚುನಾವಣೆ ನಡೆಸಬೇಕೆಂದು ಆ ವಿದ್ಯಾರ್ಥಿಗಳು ಬೀದಿಬೀದಿಯಲ್ಲಿ ಮೆರವಣಿಗೆ ಮಾಡಿ ಕೂಗು ಹಾಕುತ್ತಿದ್ದುದು ತಮಗೆಲ್ಲ ಗೊತ್ತಿದೆ ಆದರೂ ಅಲ್ಲಿ ಚುನಾವಣೆ ಮಾಡಲಿಲ್ಲಾ. ನಾಮಿನೇಟ್ ಮಾಡಿದ್ದೀರಿ. ಈ ಬಗ್ಗೆ ಆ ವಿದ್ಯಾರ್ಥಿಗಳು ಮೆರವಣಿಗೆ ಮಾಡಿಕೊಂಡು ರಾಜಭವನಕ್ಕೆ ಹೋದಾಗ ಮತ್ತು ತಮ್ಮ ಹತ್ತಿರಕ್ಕೂ ಬಂದಿದ್ದಾಗ ಏನು ಉತ್ತರ ಕೊಟ್ಟಿದ್ದೀರಿ ಅನ್ನುವುದು ಗೊತ್ತಿದೆ. ವಿದ್ಯಾರ್ಥಿಗಳಿಗೆ ಈ ಪರಿಸ್ಥಿತಿ ಏತಕ್ಕೆ ಬಂತು ಅನ್ನುವುದನ್ನು ಯೋಚನೆ ಮಾಡಬೇಕು. ಚುನಾಯಿತ ಪ್ರತಿನಿಧಿಗಳನ್ನು ಆರಿಸಬೇಕು ಅಂತ ಆಕ್ಟ್‌ನಲ್ಲಿ ಇದ್ದರೂ ಕೂಡ ನೀವು ಚುನಾವಣೆ ಮಾಡಲಿಲ್ಲಾ. ವಿದ್ಯಾರ್ಥಿಗನ್ನು ಹಾಗೆಯೇ ನಾಮಿನೇಟ್ ಮಾಡಿದ್ದೀರಿ. ಇದು ಸರಿಯಾದುದಲ್ಲ ಅಂತ ಹೇಳುತ್ತೇನೆ.

SRI S. M. YAHYA.—In the beginning it was by elections. Subsequently, during Emergency we have made it nomination.

SRI M. S. KRISHNAN —That is even worse. I don't know why during Emergency there should not be any election for the students? When once you have given right under the Act, they should be elected accordingly. But here the right has been taken away. Unless there are very very serious reasons, it can't be done. I know there was lot of agitation at the beginning of the Emergency. During the Emergency everything has stopped. If you hold the le ction, I don't think there will be much of differnce in the complexion of the students. On the other hand you are open to the charge of being undemocratic in not holding the election at all and allow students to go on the streets and gherao the Governor and the Ministers. You have brought the whole University affairs into a mess not even thinking how the enactment may in a way take away the autonomy and the democratic functioning of the University. On the other hand it is a very serious matter of which I am really surprised. ಆದುದರಿಂದ ತಾವು ಇದರ ಬಗ್ಗೆ ಸ್ವಲ್ಪ ಯೋಚನೆಮಾಡಬೇಕು.

ಇನ್ನು ನಾನ್ ಟೀಚಿಂಗ್ ಸ್ಟಾಫ್ ಬಗ್ಗೆ ಹೇಳುವುದಾದರೆ ಅದಕ್ಕೆ ರೆಪ್ರೆಸೆಂಟೇಷನ್ ಇಲ್ಲವೇ ಇಲ್ಲ.

Then you say that none from the non-teaching side should be eligible to be elected and nominated. I am surprised to know in an area where democracy is supposed to be flowering All sections should be represented, Non-teaching staff are quite in number there. Why should not they be represented; what are the reasons? Is it that they put forth their demands, you don't allow them? Will you justify this? You may say 'yes; yes' they raise their demands. Is it that they cannot contribute to it? When students are contributing, why not the staff? Are they not like University Professors and others. In the circumstances, I think there is no reasoned fallacy. That is why I say that the whole thing must be re-examined despite the fact that the Joint Select Committee had gone into. I wish you bring about a total reform in the University Act.

ಶ್ರೀ ಕೋಣಂದೂರು ಲಿಂಗಪ್ಪ.—ಎಮೆರ್ಜನ್ಸಿ ಬಂದಾಗ ಅದನ್ನು ಮಾಡಿಕೊಂಡರು.

ಶ್ರೀ ಎಂ. ಎಸ್. ಕೃಷ್ಣನ್.—ಎಮೆರ್ಜನ್ಸಿ ಬಂದಾಗ ಚುನಾವಣೆ ಮಾಡಬೇಕಾಗಿಲ್ಲಾ ಎಂದು ಪಾಸ್ ಮಾಡಿಕೊಂಡಿರುವುದು ಸರಿಯಲ್ಲ.

ಇನ್ನು ಈ ಬಿಲ್ಲಿನ ಕ್ಲಾಸ್ (4) ರಲ್ಲಿ ಏನು ಹೇಳಿದ್ದೀರಿ ಎಂದರೆ ನೀವು ಅಮೆಂಡ್‌ಮೆಂಟ್ ಕ್ಲಾಸ್ 19 ನ್ನು ತೆಗೆದುಕೊಂಡು ಈ ರೀತಿ ಹೇಳಿದ್ದೀರಾ?

Clause 4 (19) One Professor or Director in the Post-Graduate Department from each of the faculties elected by Professors and Directors in Post Graduate Departments of that faculty; "

But in the original Bill it reads like this :

"(19) Five Professors and Directors in Post-Graduate departments elected from amongst themselves; "

There must be some weighty reasons as to why Five Members have been omitted? I was also in the Joint Select Committee of the Health University Bill.

This questions whether from each faculty a person should be elected came up. If the number of faculties increases, there should be more number of people. If he is elected on this particular category it must be allowed for all categories. It cannot be only Professors and Directors.

3-30 P.M.

SRI S. M. YAHYA.—Just to give adequate representation to the faculties at the time of making this Act, only five faculties were considered. Now, we have one or two more. There are major

faculties also. To provide adequate representation instead of having five, another one or two are there and each faculty will elect its own representatives. There will not be domination of one faculty over other faculty.

SRI M. S. KRISHNAN.—I thank you for your explanation. I am not coming in the way of giving proper representation. The point is this. If it can be considered in the case of these people - Professors and Directors - don't you think the same argument will also hold good in the case of teachers other than Professors and Directors? And there also, you have given only five representatives.

SRI S. M. YAHYA.—These faculties are limited in number.

SRI M. S. KRISHNAN.—Faculty members are grouped together. From each faculty, you elect a Professor and Director. Similarly why not from among the teachers? Teachers are also working under various sciences, It may be Sciences or Arts Teacher, or Kannada Teacher, or English Teacher, or Mathematics Teacher If this argument is advanced in respect of Professors and Directors, can it not be advanced in the case of teachers? They may also say: 'Let us also be elected in the same manner, on the basis of our own Sciences or courses.' More thinking should have gone into this.

SRI S. M. YAHYA.—It will becomes so unruly.

SRI M. S. KRISHNAN.—It depends upon the number of representatives. Professors may be less and teachers may be more. Representatives of teachers may be more and representatives of Professors may be less. I am somehow feeling that this has been brought in a haste. I am not opposed to the basic question that adequate representation should be given, I tried to find out whether there is any such thing in Bombay University Act. It says:

"...The Syndicate shall consist of following namely —

(a) the Vice-Chancellor,

(b) The Rector if any, (c) Director of Education,

(d) One Dean elected by Deans of Faculties from among themselves,

(e) Four persons elected by the Academic Council from among its members to rerepresent the different Faculties as prescribed by the Statutes, of whom two shall be persons who are not Deans, Principals or Heads of University Departments,

(f) Eight persons elected by the Senate from among the Fellows who are not Principals or Teachers.

(g) One member elected by the Heads of University Departments from among themselves,

(h) Two Principals elected by the Principals in such manner as may be specified by Statutes.''

2. The term of office of the elected members of the Syndicate shall be three years."

If you see this particular clause or analogous clause in the West Bengal Act, you will find that they have fixed up a number, The idea is probably in order to see that it does not become too unweildy. I am not opposed to your giving adequate representation but you should think of this aspect.

Another important matter which has to be explained is this You have also added the Director of Health and Family Planning Services in this. I do not know how he fits into this particular set up. This matter requires explanation.

SRI S. M. YAHYA.—The hon'ble member was not here when I explained it and how the syllabus and matters relating to academy and University will have to be dealt as the Health University Act. did not come into force.

SRI M. S. KRISHNAN.—Then I have nothing to say about that particular matter.

Another clause which also requires reconsideration is regardings amendment to Section 50 which reads :

"For Clause (iii) of sub-section (2) of Section 50 of the Principal Act, the following clause shall be substituted, namely :

''(iii) One person supervising the work of the section for which recruitment is made nominated by the Vice-Chancellor and where there is no such person the Head of the Deparment of the concerned section.''

I am asking whether any such recruitment committees are there.

If you see the original Act which was also read out by hon'ble Member Sri K. Puttaswamy, will find this :

(1) There shall be constituted a Board of Appointment to select candidates for appointment to the non-teaching posts other than ministerial post in the University.

(2) The Board shall consist of—

(i) the Vice-Chancellor *Ex-Officio* Chairman ;

(ii) the Registrar ;

(iii) one person supervising the work of the section for which recruiment is made, nominated by the Vice-Chancellor ;

(iv) two persons nominated by the Chancellor in consultation with the State Government, one of whom shall be a person belong to the Scheduled Castes or Scheduled Tribes and the other shall be a person belonging to any socially and educationally backward classes of citizens declared as such by the State Government or any religious or linguistic minority.

The ministerial staff comes under the P.S.C., They are supposed to be recruited there. I do not know how many years it will take for them to be recruited properly. Under the existing circumstance, I am afraid even the recruitment cannot take place properly. I do not think such a thing exists in any other university. Even for non-ministerial staff you take so much time.

SRI S. M. YAHYA.—This is a simple amendment. Suppose a vacancy falls of a cadre who is at the highest, who has to select him ? A man who is at the highest in the position should be recruited through this process. If that vacancy falls, how it should be recruited ? That is why this amendment has been brought before the House.

SRI M. S. KRISHNAN.—This does not apply to the man who is at the highest. Infact Section 2, Clause (50) says about the Appointment of other non-ministerial staff. This is the heading. What do you mean by other non-ministerial staff ? Ministerial staff is one where Clerks etc., comes under it. The other is non-ministerial staff, i.e., all the rest of them comes under non-ministerial category. The Original Act does not make any specific distinction between the persons at the top and persons below. Now you are saying that it only refers to the vacancies at the top level. Is it necessary that such a big Committee should go into all aspects. I don't know how far it is proper. The entire thing should be looked into.

SRI S. M. YAHYA.—Other Ministerial Staff means, Technical Assistants and other trained people like Laboratory Assistants, and all others are Ministerial Staff. That is the distinction between Ministerial and other Ministerial Staff.

SRI M. S. KRISHNAN.—I am sorry. What it says is other non-ministerial staff. It is not other Ministerial Staff.

SRI S. M. YAHYA.—Technical Assistance, Laboratory Assistants etc., comes under it.

SRI M. S. KRISHNAN.—Even Peon also comes under it. What I wanted to say is, even Class IV employee comes under non-ministerial staff. It means Peons plus Technical Assistants etc., Is it necessary to have such a Big Committee for this purpose? This is my question. It may lead to a situation where in you could not recruit when it is necessary and it may not be possible to fill up the post when it is necessary. Therefore, I would request the Hon'ble Minister to consider all these problems and bring proper amendments, not in this way, to-day one amendment and tomorrow another, but in a consolidated form.

With these words, I thank the Chair for giving me an opportunity to speak and conclude.

† ಶ್ರೀ ವೆಂಕಟಲಿಂಗಯ್ಯ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಮಂಡಿಸಿರತಕ್ಕಂಥ ತಿದ್ದುಪಡಿ ಮಸೂದೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಮುಖ್ಯವಾದಂಥ ಕೆಲವು ಇಲಾಖೆಗಳಿಗೆ ಪ್ರಾತಿನಿಧ್ಯ ಕೊಡುವುದಕ್ಕಾಗಿ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಈ ರೀತಿ ಕೆಲವರಿಗೆ ಪ್ರಾತಿನಿಧ್ಯ ಕೊಡುವುದಕ್ಕೋಸ್ಕರವಾಗಿಯೇ ಈ ಯೂನಿವರ್ಸಿಟಿ ಬಾಡೀಯನ್ನು ಪೂರ್ತಿ ಮಾಡುವುದಕ್ಕೆ ಆಗಲಿಲ್ಲ. ಈ ಕೆಲಸವನ್ನು ಬೇಗ ಮಾಡುತ್ತೇವೆಂದು ಪ್ರತಿಸಲವೂ ಹೇಳುತ್ತಿದ್ದಾರೆ. ಹೋದವರ್ಷ ಸಹ ಇನ್ನು 6–8 ತಿಂಗಳುಗಳಲ್ಲಿ ಈ ಸೆನೆಟ್, ಸಿಂಡಿಕೇಟ್ ಹಾಗೂ ಅಕ್ಯಾಡಮಿಕ್ ಕೌನ್ಸಿಲ್‌ಗಳು ಕೆಲಸ ಮಾಡುವ ರೀತಿಯಲ್ಲಿ ಮಾಡುತ್ತೇವೆಂದು ಹೇಳಿದ್ದರು ಆದರೆ ಇನ್ನೂ ಮಾಡಲಿಲ್ಲ. ಈ ವಿಚಾರದಲ್ಲಿ ನಿಜವಾಗಿಯೂ ಕೂಡ ಸರ್ಕಾರ ಫೈಲ್ಯೂರ್ ಆಗಿದೆ ಎಂದರೆ ತಪ್ಪಾಗಲಾರದು. ಮೊದಲೇ ಯಾರು ಯಾರಿಗೆ ಅಲ್ಲಿ ಪ್ರಾತಿನಿಧ್ಯ ಕೊಡಬೇಕೆಂಬುದನ್ನು ಯೋಚನೆ ಮಾಡಿ ಮಾಡಬೇಕಾಗಿತ್ತು. ಅಥವಾ ಈ ಬಾಡೀಸ್ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ನಂತರ ಯಾರು ಯಾರಿಗೆ ಅಲ್ಲಿ ಪ್ರಾತಿನಿಧ್ಯ ಕೊಡಬೇಕೋ ಅವರಿಗೆಲ್ಲಾ ಕೊಡುವುದಕ್ಕೆ ಏರ್ಪಾಡು ಮಾಡಬಹುದಾಗಿತ್ತು, ಆದರೆ ಈ ರೀತಿ ಮಾಡದೆ ಪ್ರತಿಸಲವೂ ಕೆಲವರಿಗೆ ಅಲ್ಲಿ ಪ್ರಾತಿನಿಧ್ಯ ಕೊಡಬೇಕಾಗಿದೆ ಎಂಬ ಕಾರಣ ಕೊಟ್ಟು ಈ ರೀತಿ ತಿದ್ದುಪಡಿಗಳನ್ನು ತರುತ್ತಿದ್ದಾರೆ. ಇದೇ ರೀತಿ ಇನ್ನು ಮುಂದೆಯೂ ತಿದ್ದುಪಡಿಗಳನ್ನು ತರಬಹುದು. ಈ ರೀತಿ ಮಾಡುವುದು ಸರಿಯಲ್ಲ. ಮಾಡತಕ್ಕಂಥ ಕೆಲಸವನ್ನು ಪೂರ್ಣವಾಗಿ ಮಾಡಿ, ಆದರೆ ಈ ರೀತಿ ಯೂನಿವರ್ಸಿಟಿಗಳನ್ನು ತಾತ್ಸಾರ ಮನೋಭಾವದಿಂದ ನೋಡುವುದು ಸರಿಯಲ್ಲ. ಯೂನಿವರ್ಸಿಟಿ ಬಾಡೀಸ್‌ನ್ನು ಪೂರ್ಣಗೊಳಿಸದೇ ಇರುವುದನ್ನು ನೋಡಿದರೆ, ಈ ಕೆಲಸ ಮಾಡಲು ಸರ್ಕಾರಕ್ಕೆ ಶಕ್ತಿ ಇಲ್ಲವೇನೋ ಎನ್ನುವ ಅನುಮಾನ ಬರುತ್ತಿದೆ. ಈ ಯೂನಿವರ್ಸಿಟಿ ಆಕ್ಟ್ ಪ್ರಕಾರ ಆದರ ಎಲ್ಲ ಕೆಲಸಗಳು ಸರ್ಕಾರದ ಮುಖಾಂತರವೇ ಆಗುವುದಕ್ಕೆ ಅವಕಾಶ ಮಾಡಿಕೊಂಡು ಈ ವೈಸ್‌ಛಾನ್ಸಲರ್ ಕೇವಲ ಗುಮಾಸ್ತರ ರೀತಿಯಲ್ಲಿ ಕೆಲಸ ಮಾಡುವಂತೆ ಮಾಡಿದ್ದಾರೆ. ಫೈಲ್ ತೆಗೆದುಕೊಂಡು ಸಂಬಂಧಪಟ್ಟ ಸೆಕ್ರೆಟರಿಯವರ ಹತ್ತಿರ ತಿಂಗಳುಗಟ್ಟಲೆ ಅಲೆದಾಡುವಂತಹ ರೀತಿಯಲ್ಲಿ ಮಾಡಿದ್ದಾರೆ. ಈ ರೀತಿ ಪ್ರತಿ ಕೆಲಸಕ್ಕೂ ತಿಂಗಳುಗಟ್ಟಲೆ ಕಾಯುವಂತಹ ರೀತಿಯಲ್ಲಿ ಮಾಡಿರುವುದು ಸರಿಯಲ್ಲ.

ಇನ್ನು ಸ್ಟಾಫ್ ವಿಷಯದಲ್ಲಿ ಹೇಳಬೇಕೆಂದರೆ, ಮಿನಿಸ್ಟೀರಿಯಲ್ ಸ್ಟಾಫ್‌ನ್ನು ಅಪಾಯಿಂಟ್ ಮಾಡಬೇಕಾದರೆ ಪಿ.ಎಸ್.ಸಿ.ಯಿಂದ ಲಿಸ್ಟ್ ತರಿಸಿಕೊಂಡು ಮಾಡಬೇಕೆಂದು ಈ ಆಕ್ಟ್‌ನಲ್ಲಿ ಹೇಳಿದ್ದಾರೆ. ಈಗ ಪ್ರತಿ ಇಲಾಖೆಗೆ ಸಂಬಂಧಪಟ್ಟಂತೆ ರೆಕ್ರೂಟ್‌ಮೆಂಟ್ ಕಮಿಟಿಗಳು ಇರುವಂತೆ ಇಲ್ಲಿಯೂ ಸಹ ಒಂದು ಪ್ರತ್ಯೇಕ ರೆಕ್ರೂಟ್‌ಮೆಂಟ್ ಕಮಿಟಿಯನ್ನು ರಚನೆ ಮಾಡಿ, ಆ ಕಮಿಟಿಯ ಮೂಲಕವೇ ಮಿನಿಸ್ಟೀರಿಯಲ್ ಸ್ಟಾಫ್‌ನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಯೂನಿವರ್ಸಿಟಿಯವರಿಗೇ ಅಧಿಕಾರವನ್ನು ಕೊಡಬೇಕು. ಏಕೆಂದರೆ ಪಿ.ಎಸ್.ಸಿ.ಯಿಂದ ಲಿಸ್ಟ್

ತರಿಸಿಕೊಂಡು ಅಪಾಯಿಂಟ್ ಮಾಡಬೇಕೆಂದರೆ ಬಹಳ ನಿಧಾನವಾಗುತ್ತದೆ. ಆಗ ಕೆಲಸಕಾರ್ಯ ಗಳಾಗುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಪಿ.ಎಸ್.ಸಿ.ಯಿಂದ ಲಿಸ್ಟ್ ತರಿಸಿಕೊಳ್ಳು ವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾರ್ಥಿ ಪ್ರತಿನಿಧಿಗಳಿಗೆ ಅಲ್ಲಿ ಪ್ರಾತಿನಿಧ್ಯ ಕೊಡುವ ಬಗ್ಗೆ ಹೇಳಬೇಕೆಂದರೆ, ಈ ಮೊದಲು ತಾವು ಇದೇ ವಿಚಾರದಲ್ಲಿ ತಿದ್ದುಪಡಿಯನ್ನು ತಂದಿದ್ದಾಗ, ನಾವು ನಾಮಿನೇಷನ್ ಮಾಡುವುದು ಬೇಡ, ಚುನಾವಣೆಯ ಮೂಲಕ ಆರಿಸಿ ಬರಲು ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದೆವು. ಆದರೂ ಸಹ ಸರ್ಕಾರದವರು ತಮಗೆ ಬೇಕಾದವರನ್ನು ನಾಮಿನೇಷನ್ ಮಾಡಲು ಅವಕಾಶ ಮಾಡಿಕೊಂಡಿದ್ದಾರೆ. ಇದರಿಂದಲೇ ಹೊರಗಡೆ ವಿದ್ಯಾರ್ಥಿಗಳು ಗಲಾಟೆ ಮಾಡು ತ್ತಿದ್ದಾರೆ ಮತ್ತು ಚುನಾವಣಾ ನಡೆಸಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಆದ್ದರಿಂದ ಆದಷ್ಟು ಬೇಗ ವಿದ್ಯಾರ್ಥಿ ಪ್ರತಿನಿಧಿಗಳು ಚುನಾವಣೆಯ ಮುಖಾಂತರ ಸೆನೆಟ್‌ಗೆ ಆರಿಸಿ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನಾನು ಮುಖ್ಯವಾಗಿ ಹೇಳುವುದೇನೆಂದರೆ, ಯೂನಿವರ್ಸಿಟಿ ಬಾಡೀಸ್ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು. ಯಾರಿಗಾದರೂ ಅಲ್ಲಿ ಪ್ರಾತಿನಿಧ್ಯ ಕೊಡುವುದಿದ್ದರೆ ಕ್ರಮೇಣ ಕೊಡಿ. ಆದರೆ ಅದೇ ಉದ್ದೇಶದಿಂದ ಅವು ಕೆಲಸ ಮಾಡದಂತೆ ತಡೆಹಿಡಿಯುವುದು ಸರಿಯಲ್ಲ. ಈ ರೀತಿ ಪದೇಪದೇ ತಿದ್ದುಪಡಿಗಳನ್ನು ತರುವುದರಿಂದ ಕಾಲಹರಣವಾಗುತ್ತದೆ. ಆದ್ದರಿಂದ ಯೂನಿವರ್ಸಿಟಿ ಬಾಡೀಸ್ ಅದಂಥ ಸೆನೆಟ್, ಸಿಂಡಿಕೇಟ್ ಹಾಗೂ ಅಕ್ಯಾಡೆಮಿಕ್ ಕೌನ್ಸಿಲ್‌ಗಳು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿ ಮಸೂದೆಯ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ನನಗಿಂತ ಮುಂಚೆ ಮಾತನಾಡಿದಂಥ ಮಾನ್ಯ ಪುಟ್ಟಸ್ವಾಮಿಯವರು ಅಮೂಲಾಗ್ರವಾಗಿ ಇದರ ಚಿರಕೋರೆಗಳನ್ನು ಎತ್ತಿ ಹೇಳಿದ್ದಾರೆ. ಮಾನ್ಯ ಕೃಷ್ಣನ್ ಅವರೂ ಸಹ ಅದೇರೀತಿ ಹೇಳಿದ್ದಾರೆ. ಇಂದು ನಮ್ಮ ಕಥೆ ಏನಾಗಿದೆ ಎಂದರೆ ಇವೊತ್ತು ವಿಶ್ವವಿದ್ಯಾನಿಲಯ ಎಂದು ಹೆಸರು ಕೊಟ್ಟಿದ್ದೇವೆ. ಆದರೆ ಅದು ನಮ್ಮ ಸರ್ಕಾರದ ಅಡಿಯಾಳಾಗಿ, ಅದರ ಪಾದಾರವಿಂದವನ್ನು ಒಲೈಸತಕ್ಕಂಥ ಗುಲಾಮಗಿರಿಯನ್ನಾಗಿ ಮಾಡಿಕೊಂಡಿರುವ ಒಂದು ಸಂಸ್ಥೆಯಾಗಿ ಮಾಡಿ ಇಟ್ಟಿದ್ದೇವೆ. ಈ ವಿಶ್ವವಿದ್ಯಾನಿಲಯಗಳು ಸಮಗ್ರವಾದಂಥ ಸಂಸ್ಥೆಗಳಾಗಿವೆ ಎಂದು ನಾವು ಹೆಸರಿಗೆ ಮಾತ್ರ ಹೇಳುತ್ತಿದ್ದೇವೆ. ತುರ್ತುಪರಿಸ್ಥಿತಿ ಕಾಲದಲ್ಲಿ ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವ ಜನತಂತ್ರ ಎಂದು ಹೆಸರು ಹೇಳಿಕೊಂಡು ಯಾವ ರೀತಿ ಸರ್ವಾಧಿಕಾರವನ್ನು ನಡೆಸಿದರೋ ಅದೇರೀತಿ ಈ ವಿಶ್ವವಿದ್ಯಾನಿಲಯ ಎನ್ನುವ ಹೆಸರನ್ನು ಜಗತ್ತಿಗೆ ತೋರಿಸುವುದಕ್ಕಾಗಿ ಈ ರೀತಿ ಸ್ವತಂತ್ರವಾದ ಸಂಸ್ಥೆ ಎಂದು ಹೇಳಿ, ಮತ್ತೊಂದು ಕಡೆ ಅದರ ಜೀವವನ್ನು ಸಂಪೂರ್ಣ ವಾಗಿ ತೆಗೆದಿಟ್ಟಿದ್ದೇವೆ.

ಈ ಒಂದು ಕೀರ್ತಿ ನಿಮ್ಮ ಸರ್ಕಾರಕ್ಕೆ ಸಲ್ಲುವುದು. ವಿಶ್ವವಿದ್ಯಾನಿಲಯದಲ್ಲಿ ಸ್ವತಂತ್ರವಾದ ಒಂದು ವಾತಾವರಣ ಇರಬೇಕು. ಸ್ವತಂತ್ರವಾಗಿ ವಿಚಾರ ಮಾಡುವುದಕ್ಕೆ ಅವಕಾಶ ಇರಬೇಕು, ದೇಶಕ್ಕೆ ಮತ್ತು ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೊಸ ವಿಚಾರವನ್ನು ಸೃಷ್ಟಿಸುವ ಚಿಲುಮೆ ಯಾಗಿರಬೇಕು ಎನುವ ಅಭಿಪ್ರಾಯ ಇದೆ. ಆದರೆ ಇದರಲ್ಲಿ ಏನೇನು ಬೇಕೋ ಎಲ್ಲಾ ತಿದ್ದುಪಡಿ ಗಳನ್ನೂ ತಂದಿದ್ದಾರೆ. ಕಾಲೇಜಿನಲ್ಲಿ ಪಾಠ ಮಾಡಬೇಕಾದರೆ ಮಂತ್ರಿಗಳನ್ನು ಕೇಳಿಕೊಂಡು ಪಾಠ ಮಾಡಬೇಕು ಎನ್ನುವ ಒಂದು ತಿದ್ದುಪಡಿಯನ್ನು ಮಾತ್ರ ತಂದಿಲ್ಲ. ಅದನ್ನು ತಂದರೆ ಸಾರ್ಥಕವಾಗುತ್ತದೆ. ಅಕೆಡಮಿಕ್, ಕೌನ್ಸಿಲ್, ಸಿಂಡಿಕೇಟ್, ಸೆನೆಟ್ ಯಾವ ಒಂದು ರೆಸುಲ್ಯೂಷನ್ ಮಾಡಿದರೂ ಕೂಡ ಸರ್ಕಾರದವರು ಅದನ್ನು ಮಂಜೂರು ಮಾಡಿದ ಮೇಲೆ ಅದು ಕಾರ್ಯಗತವಾಗಬೇಕು. ಈ ಸ್ಥಿತಿಗೆ ಯೂನಿವರ್ಸಿಟಿಗಳನ್ನು ತಂದಿಟ್ಟಿದ್ದಾರೆ. ಇದರ ಒಂದು ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಒಂದು ಬೋರ್ಡ್ ಮಾಡಬೇಕೆಂದು ಈಗ ಒಂದು ತಿದ್ದುಪಡಿ ಯನ್ನು ತಂದಿದ್ದಾರೆ, ಇವೊತ್ತು ಬೇರೆ ವ್ಯವಹಾರಗಳ ಬಗ್ಗೆ ನಾನಾ ರೀತಿಯ ಆಸಕ್ತಿಯನ್ನು

ವಹಿಸಿ ಮೂಲಭೂತವಾದ ವಿಚಾರಗಳ ಬಗ್ಗೆ ಕ್ರಮಕೈಗೊಂಡಿದ್ದಾರೆ. ಪ್ರಜಾಪ್ರಭುತ್ವದ ಬಗ್ಗೆ ಸ್ವಲ್ಪ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಶ್ರೀಮಾನ್ ವೆಂಕಟಲಿಂಗಯ್ಯನವರು ಹೇಳಿದರು; ವಿದ್ಯಾರ್ಥಿಗಳ ಬಗ್ಗೆ ಯಾವ ತರಹ ಕಾಳಜಿ ವಹಿಸಿ ನಾಮಿನೇಷನ್ ಮಾಡಿದರು ಎಂದು. ಇದರ ಬಗ್ಗೆ ಈಗಾಗಲೇ ಇಡೀ ರಾಜ್ಯದಲ್ಲಿ ವಿದ್ಯಾರ್ಥಿಗಳ ಚಳುವಳಿ ಪ್ರಾರಂಭವಾಗಿದೆ. ಈಗಾಗಲೇ ಸ್ವಲ್ಪ ಹೊತ್ತಿನ ಕೆಳಗೆ ವಿಧಾನಸೌಧಕ್ಕೆ ಪ್ರೊಸೆಷನ್ ಬಂದಿದ್ದಾಗ ಅವರಿಗೆ ಪೋಲೀಸಿನವರು ಲಾಟಿ ಚೈನು ಉಪಯೋಗಿಸಿ ಅವರನ್ನು ವಾಪಸ್ಸು ಕಳುಹಿಸಿದರು. ಸೆನೆಟ್ಟಿಗೆ ವಿದ್ಯಾರ್ಥಿಗಳನ್ನು ನಾಮಕರಣ ಮಾಡುವ ಬದಲು ಚುನಾವಣೆಯ ಮೂಲಕ ಆರಿಸಬೇಕು. ಈ ಬಗ್ಗೆ ವಿಧಾನಪರಿಷತ್ತಿನಲ್ಲಿ ಮಾನ್ಯ ವಿದ್ಯಾ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರು ಈ ಬಗ್ಗೆ ಕ್ರಮಕೈಗೊಳ್ಳಬೇಕು. ಈಗ ಇದರ ಬಗ್ಗೆ ತಿದ್ದುಪಡಿಯನ್ನು ತರುತ್ತೇವೆ ಎಂದ ಹೇಳುತ್ತಿದ್ದಾರೆ. ಅದನ್ನು ತಂದರೆ ಬಹಳ ಸಂತೋಷ. ಬೋರ್ಡಿಗೆ ನಾಮಕರಣ ಮಾಡುವಾಗ ಯಾರು ಯಾರನ್ನು ಹಾಕಬೇಕು ಎನ್ನುವ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ಸ್ವತಂತ್ರವಾಗಿ ವಿಚಾರ ಮಾಡಿ ಮಾತನಾಡುವುದು ತಪ್ಪು. ಅಂಥವರನ್ನು ಈ ಬೋರ್ಡುಗಳಲ್ಲಿ ನಾಮಕರಣ ಮಾಡುವುದಿಲ್ಲ. ಎಸ್. ಮ್ಯಾನ್ ಹಾಗೆ ಇವರು ಹೇಳಿದ ಹಾಗೆ ಕೇಳಿಕೊಂಡು ಹೋಗುವಂತಹವರನ್ನು ಇವುಗಳಿಗೆ ನಾಮಕರಣ ಮಾಡುತ್ತಾರೆ ಇದು ಸರಿಯಲ್ಲ. ಈಗ ಅರ್ಹತೆಗೆ ಮಾನ್ಯತೆ ಇಲ್ಲ. ಅಕೆಡಮಿಕ್ ಕೌನ್ಸಿಲ್‌ನಲ್ಲಾಗಲೀ ಟೆಕ್ಸ್ಟ್‌ಬುಕ್ ಕಮಿಟಿಯಲ್ಲಾಗಲೀ ಸದಸ್ಯರನ್ನು ನೇಮಕ ಮಾಡುವಾಗ ನಮ್ಮ ನಾಡಿನ ಅತ್ಯಂತ ಶ್ರೇಷ್ಠ ಸಾಹಿತಿಗಳಾದ ಶ್ರೀ ಶಿವರಾಮಕಾರಂತರು ಗೋಪಾಲಕೃಷ್ಣ ಅಡಿಗರು ಇಂಥವರನ್ನು ಹಾಕುವುದಿಲ್ಲ. ಅವರು ನಿಷ್ಠೂರವಾದಿಗಳು, ಖಂಡಿತವಾದಿಗಳು ಇದ್ದದ್ದನ್ನು ಇದ್ದಹಾಗೆ ಹೇಳುತ್ತಾರೆ. ಆದ್ದರಿಂದ ಅಂಥವರನ್ನು ಹಾಕುವುದಿಲ್ಲ. ಇವರು ಎಂಥಹವರನ್ನು ಆ ಸಮಿತಿಗಳಲ್ಲಿ ಹಾಕುತ್ತಾರೆ ಎಂದರೆ ಇವರು ಹೇಳಿದ ಹಾಗೆ ಕೇಳುವ ತಜ್ಞರನ್ನು ಆ ಸಮಿತಿಗಳಲ್ಲಿ ಹಾಕುತ್ತಾರೆ. ಇವರನ್ನು ಗುಣಗಾನ ಮಾಡುವಂಥಹವರನ್ನು ಹಾಕುತ್ತಾರೆ. ವಿಚಾರವಂತರು, ಸಾಹಿತಿಗಳು ಬುದ್ಧಿವಂತರು, ಸ್ವತಂತ್ರ ರೀತಿಯಲ್ಲಿ ಮಾತನಾಡತಕ್ಕವರು. ಇಂಥವರನ್ನು ಈ ಸಮಿತಿಗಳಿಗೆ ನಾಮಕರಣ ಮಾಡುವುದು ಯೋಗ್ಯವಾಗಿದೆ. ಈ ತಿದ್ದುಪಡಿಯಿಂದ ಅಂಥಾ ಒಂದು ಹೆಚ್ಚಿನ ಪ್ರಯೋಜನ ಆಗದಿದ್ದರೂ ಕೂಡ ಒಂದು ಅನುಕೂಲವನ್ನು ಮಾಡಿದ್ದಾರೆ. ಅದು ಏನೆಂದರೆ ಒಂದೂವರೆ ಎರಡು ವರ್ಷಗಳಿಂದ ವಿಶ್ವವಿದ್ಯಾನಿಲಯದ ಬಾಡಿಗಳು ನಡೆಯದೆ ಇದ್ದಹಾಗೆ ಮಾಡಿದ್ದಾರೆ. ಸಿಂಡಿಕೇಟ್, ಸೆನೆಟ್ ಯಾವುದೂ ಕಾನ್‌ಸ್ಟಿಟ್ಯೂಟ್ ಆಗಿಲ್ಲ. ಯಾವುದೂ ಫಂಕ್ಷನ್ ಆಗಿಲ್ಲ. ಇಲ್ಲಿಯವರೆಗೂ ಹಾಗಾಗುವುದಕ್ಕೆ ಯಾರೂ ಕಾರಣರಲ್ಲ ಇರತಕ್ಕವರೇ ರಾಜಕೀಯ ಮಾಡಿದರು ಈಗ ಇದರ ಬಗ್ಗೆ ವಿಚಾರ ಮಾಡುವಂತಹ ಸ್ಥಿತಿ ಬಂದಿದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಪ್ರಧಾನಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಮಾಸ್ಕೋಗೆ ಹೋಗಿಬಂದ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಹೊರಡಿಸಿದರು. ಈಗ ನಮ್ಮ ಪ್ರಧಾನಿಗಳಾದ ಶ್ರೀ ಮುರಾರ್ಜಿ ದೇಸಾಯಿ ಅವರು ಇಂಗ್ಲೆಂಡಿಗೆ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಕಾನ್‌ಫರೆನ್ಸ್‌ಗೆ ಹೋಗಿ ಬಂದ ಬಗ್ಗೆ ಅದರ ಸೊಲ್ಲೇ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ನಮ್ಮ ಪ್ರಧಾನಿಗಳು ಎಂದು ಹೇಳಿದರು. ಅವರು ಎಲ್ಲರಿಗೂ ಪ್ರಧಾನ ಮಂತ್ರಿಗಳೇ.

ಶ್ರೀ ಕೋಣಂದೂರು ಲಿಂಗಪ್ಪ.—ಸಂತೋಷ. ಈಗಲಾದರೂ ನಿಮಗೆ ಜ್ಞಾನೋದಯವಾಗಿದ್ದಕ್ಕೆ ನಿಮಗೆ ಅಭಿನಂದಿಸುತ್ತೇನೆ ಈ ರೀತಿ ವಿಶ್ವವಿದ್ಯಾನಿಲಯಗಳು ಯಾವುದೇ ಜನರ ಯಾವುದೇ ಅಧಿಕಾರ ಗದ್ದುಗೆಯಲ್ಲಿರತಕ್ಕವರ ಕೈಗೊಂಬೆಗಳಾಗಿ ನಡೆಯಬಾರದು. ಮತ್ತು ಒಂದು ಸಮಗ್ರವಾದ ತಿದ್ದುಪಡಿಯನ್ನು ಇದರ ಬಗ್ಗೆ ತಂದು ಪಾಸು ಮಾಡಿಕೊಂಡು ಇದರಲ್ಲ ಸರ್ಕಾರದ ಹತೋಟಿಯನ್ನು ತೆಗೆದುಹಾಕಿ ಸಾಧ್ಯವಾದಷ್ಟು ಅಕೆಡಮಿಕ್ ಕೌನ್ಸಿಲ್, ಸಿಂಡಿಕೇಟ್, ಸೆನೆಟ್ ಇವುಗಳಿಗೆ ಸಂಪೂರ್ಣ ಸ್ವಾತಂತ್ರವನ್ನು ಕೊಡುವುದಕ್ಕೆ ತಿದ್ದುಪಡಿಯನ್ನು ತರಬೇಕು, ಮುಖ್ಯವಾಗಿ ನಮ್ಮ ಸ್ನೇಹಿತರಾದ ವೆಂಕಟಲಿಂಗಯ್ಯನವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವುಗಳ ಬಗ್ಗೆ ತಿದ್ದುಪಡಿಯನ್ನು ತರುತ್ತೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಆ ತಿದ್ದುಪಡಿಗಳನ್ನು ತಂದಾಗ ಅವುಗಳ ಬಗ್ಗೆ ಮಾತನಾಡುತ್ತೇನೆ. ಈಗ ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಯಾಹ್ಯ.—ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಸದಸ್ಯರು ಮೊದಲನೆಯದಾಗಿ ಅಕಾಡೆಮಿಕ್ ಕೌನ್ಸಿಲ್ ಸೆನೆಟ್ ಮತ್ತು ಸಿಂಡಿಕೇಟ್ ಈ ಸಂಸ್ಥೆಗಳ ರಚನೆಯನ್ನು ಬಹಳ ತೀವ್ರವಾಗಿ ಮಾಡಬೇಕು ಎಂದು ಭೂಳ ಕಳಕಳಿಯಿಂದ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇದನ್ನು 1971ರಿಂದ ಎಕ್ಸ್‌ಟೆಂಡ್ ಮಾಡಿಕೊಂಡು ಬಂದಿದ್ದಾರೆ. ನಂತರ ಹೊಸ ಆಕ್ಟ್ ಬಂತು. ಈ ರೀತಿ ನಡೆದುಕೊಂಡು ಹೋಗಿದೆ ಎಂದು ಹೇಳಿದ್ದಾರೆ. ಸರ್ಕಾರ ಒಂದು ಹೊಸ ಆಕ್ಟ್ ಮಾಡಬೇಕು ಎಂದು ಹೇಳಿ ಒಂದು ಯೂನಿಫಾರಂ ಆಕ್ಟ್ ತಂದರು. ಈ ಯೂನಿಫಾರಂ ಆಕ್ಟ್‌ನಲ್ಲಿ ಕೆಲವು ಸ್ಪೆಷಲ್ ಫ್ಯೂಚರ್ ಸಹ ಇವೆ. ಇದನ್ನು ಇತರ ಯೂನಿವರ್ಸಿಟಿಗಳಲ್ಲಿ ತೆಗೆದುಕೊಂಡು ಹೇಗೆ ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ನೋಡುತ್ತಿದ್ದೇನೆ. ಮೊದಲನೆಯದಾಗಿ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಎಲ್ಲರಿಗೂ ಸ್ಥಾನ ಇರಬೇಕು, ಎಲ್ಲರಿಗೂ ಅವಕಾಶ ಇರಬೇಕು, ಮತ್ತು ಸೆನೆಟ್ ಕಾನ್‌ಸ್ಟಿಟ್ಯೂಟ್ ಮಾಡಬೇಕಾದರೆ ಅದರಲ್ಲಿ ಹರಿಜನಗಿರಿಜನರಿಗೆ ಸ್ಥಾನವನ್ನು ಕೊಡಬೇಕು, ಬ್ಯಾಕ್‌ವರ್ಡ ಕ್ಲಾಸಿನವರಿಗೆ ರೆಪ್ರೆಜೆಂಟೇಷನ್ ಕೊಡಬೇಕು, ಮೈನರ್ ಕಮ್ಯೂನಿಟಿಗೆ ರೆಪ್ರೆಜೆಂಟೇಷನ್ ಕೊಡಬೇಕು, ಅದೇ ರೀತಿ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಹರಿಜನಗಿರಿಜನರಿಗೆ ಮತ್ತು ಇತರರಿಗೆ ಸ್ಥಾನವನ್ನು ಕೊಡಬೇಕು, ಎಂದೂ ಹಾಗೆಯೇ ಸಿಂಡಿಕೇಟ್‌ನಲ್ಲಿಯೂ ಸಹ ಹರಿಜನಗಿರಿಜನರಿಗೆ ಮತ್ತು ಇತರರಿಗೆ ಸ್ಥಾನವನ್ನು ಕೊಡಬೇಕು ಎಂದು ಒಂದು ವಿಶಾಲ ದೃಷ್ಟಿಯಿಂದ ಎಲ್ಲರಿಗೂ ಅವಕಾಶವಾಗುವ ರೀತಿಯಲ್ಲಿ ಮಾಡಿಕೊಟ್ಟು ಇಂಥಾ ಒಂದು ದೊಡ್ಡ ಎಲ್ಲಾ ಯೂನಿವರ್ಸಿಟಿಗಳಿಗೂ ಅನ್ವಯಿಸುವಂತಹ ಒಂದು ಕಾರ್ಯವನ್ನು ಮಾಡುವಾಗ ಕಾನೂನಿನ ಅಡೆ ತಡೆಗಳು ಬರುವುದು ಸ್ವಾಭಾವಿಕ. ಅದಕ್ಕಾಗಿ ಸೆನೆಟ್ ಮತ್ತು ಸಿಂಡಿಕೇಟ್ ಅಕೆಡಮಿಕ್ ಕೌನ್ಸಿಲ್‌ಗಳನ್ನು ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಆಗಲಿಲ್ಲ. ಈ ತಿದ್ದುಪಡಿ ಜಾರಿಗೆ ಬಂದ ನಂತರ ಯಾವುದೇ ತೊಂದರೆ ಇರುವುದಿಲ್ಲ. ಈಗ ಎಲ್ಲಾ ಕೆಲಸವೂ ಯೂನಿವರ್ಸಿಟಿಯಲ್ಲಿ ನಿಂತು ಹೋಗಿದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮತ್ತು ಶ್ರೀಮಾನ್ ವೆಂಕಟಲಿಂಗಯ್ಯನವರು ಈ ಯೂನಿವರ್ಸಿಟಿಗಳಲ್ಲಿ ಸರ್ಕಾರದ ಇಂಟರ್‌ಫಿಯರೆನ್ಸ್ ಬಹಳ ಇದೆ, ಇದು ಒಂದು ಡಿಪಾರ್ಟ್‌ಮೆಂಟ್ ಆಗಿದೆ ಎಂದು ಹೇಳಿದರು. ಆದರೆ ಈ ಆಕ್ಟಿನಲ್ಲಿ ಸರ್ಕಾರಕ್ಕೆ ಯಾವ ಅಧಿಕಾರವೂ ಇಲ್ಲ ಎಂದು ನಾನು ಹೇಳುತ್ತಿದ್ದೇನೆ. ಪ್ರತಿಯೊಂದನ್ನೂ ಸಹ ವೈಸ್‌ಛಾನ್ಸಲರ್ ಇನ್ ಕನ್‌ಸಲ್ಟೇಷನ್ ವಿತ್ ಛಾನ್ಸಲರ್ ಎಂದು ಇದೆ. ಆದರೆ ಡ್ರಾಫ್ಟ್ ಬಿಲ್ಲಿನಲ್ಲಿ ವೈಸ್‌ಛಾನ್ಸಲರ್, ಪ್ರೋಛಾನ್ಸಲರ್ ಮತ್ತು ಛಾನ್ಸಲರ್ ಎಂದು ಇತ್ತು. ಈಗ ಇದರಲ್ಲಿ ಪ್ರೋಛಾನ್ಸಲರ್ ತೆಗೆದು ಹಾಕಿದೆ. ಇದರಿಂದ ಏನಾಗಿದೆ ಎಂದರೆ ಸರ್ಕಾರ ಇಲ್ಲಿ ಪೋಸ್ಟ್‌ಮ್ಯಾನ್ ಆಗಿದೆ. ಎಲ್ಲವನ್ನೂ ನೋಡಿಕಳುಹಿಸುವುದು ಮಾತ್ರ ಇದೆ. ಯೂನಿವರ್ಸಿಟಿ ಅಟಾನಮಸ್ ಆಗಿರಬೇಕು ಎಂದು ಹೇಳಿ ಈ ರೀತಿ ಸರ್ಕಾರ ಮಾಡಿದೆ.

ಇಂತಹ ಒಂದು ಒಳ್ಳೆಯ ಅಟಾನಮಸ್ ಇರಬೇಕು ಎಂದು ನಮ್ಮ ಸರ್ಕಾರದವರು ಮಾಡಿದಷ್ಟು ಬೇರೆ ಎಲ್ಲೂ ಖಂಡಿತವಾಗಿ ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಧೈರ್ಯವಾಗಿ ಹೇಳುತ್ತೇನೆ. ಏಕೆಂದರೆ, ಯಾವುದೇ ಒಂದು ಆಕ್ಟನ್ನು ನೋಡಿದರೂ ಸರ್ಕಾರಕ್ಕೆ ಒಂದಲ್ಲ ಒಂದು ರೀತಿಯಲ್ಲ ಕಂಟ್ರೋಲ್ ಇರುತ್ತದೆ, ಆದರೆ ನಮ್ಮ ಈ ಆಕ್ಟಿನಲ್ಲಿ ಕಂಟ್ರೋಲ್ ಇಲ್ಲ. ಸರ್ಕಾರಕೆ ಈ ಯೂನಿವರ್ಸಿಟಿಗಳು ಅಟಾನಮ್ ಇರಬೇಕು ಎಂಬ ಉದ್ದೇಶ ಇರುವುದರಿಂದ ಈ ರೀತಿ ಪ್ರಾವಿಸೋಗಳನ್ನು ಈ ಒಂದು ಮಾಡಲ್ ಆಕ್ಟಿನಲ್ಲಿಮಾಡಿ ಇಟ್ಟಿದ್ದೇವೆ. ಇದಕ್ಕೆ ಬೇರೆಯವರೂ ಅಪ್ರಿಸಿಯೇಟ್ ಮಾಡುತ್ತಿದ್ದಾರೆ. ಆದುದರಿಂದ ನಮ್ಮ ನಡವಳಿಕೆಯಲ್ಲ ಯಾವ ರೀತಿಯಲ್ಲೂ ಸರ್ಕಾರ ಇಂಟರ್‌ಫೆಯರೆನ್ಸ್ ಮಾಡಿದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಅಂತಹ ರೀತಿಯಲ್ಲಿ ಸರ್ಕಾರ ವರ್ತನೆ ಮಾಡಿಕೊಂಡಿದ್ದೇವೆ. ಅದಕ್ಕಾಗಿ ಮಾನ್ಯ ಸದಸ್ಯರು ಇದನ್ನು ಖಂಡಿತವಾಗಿಯೂ ಅಪ್ರಿಸಿಯೇಟ್ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

4-00 ಪಿ.ಎಂ.

ಶ್ರೀ ಕೋಣಂದೂರು ಲಿಂಗಪ್ಪ.—ಮೈಸೂರು ಯೂನಿವರ್ಸಿಟಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ದೇವರಾಜ್ ಅರಸ್ ಅವರ ಭಾಷಣಗಳ 2-3 ಸಂಪುಟಗಳನ್ನು ತಂದರಲ್ಲ, ಅದು ಇಂಟರ್‌ಫಿಯರೆನ್ಸ್ ಅಲ್ಲವೇ ?

ಶ್ರೀ ಎಸ್.ಎಂ. ಯಾಹ್ಯಾ.—ಮಾನ್ಯ ಕೋಣಂದೂರು ಲಿಂಗಪ್ಪನವರು ಒಳ್ಳೆಯ ಕಮಿಟಿಯನ್ನು ಮಾಡಿ ಪುಸ್ತಕ ಮಾಡಿದರೆ ಅದನ್ನೂ ಪ್ರಿಂಟ್ ಮಾಡಿಸುತ್ತೇನೆ. ಆದುದರಿಂದ ಸರ್ಕಾರದವರು ಹೀಗೆ ನಡೆದುಕೊಂಡು ಹೋಗುತ್ತಿದ್ದಾರೆ ಅದಕ್ಕೆ ಕಾನೂನಿನ ದೋಷಗಳು, ಅಡ್ಡಿಗಳು ಬಂದರೆ, ಅದನ್ನು ಈ ಸಭೆಗೆ ತಿಳಿಸಬೇಕಾಗುತ್ತದೆ ಮತ್ತು ಅದಕ್ಕೆ ತಕ್ಕಂತೆ ಅಮೆಂಡ್‌ಮೆಂಟ್‌ಗಳನ್ನು ತರುತ್ತಾ ಇದ್ದೇವೆ. ಮಾನ್ಯ ಎಂ. ಎಸ್. ಕೃಷ್ಣನ್‌ರವರು ಸ್ಟ್ಯಾಟ್ಯೂಟ್ ವಿಚಾರದಲ್ಲಿ ವೈಸ್-ಛಾನ್ಸಲರ್‌ಗೆ ಹೋಗಬೇಕಾಗುತ್ತದೆ ಎಂದು ಹೇಳಿದ್ದಾರೆ. ವೈಸ್-ಛಾನ್ಸಲರ್ ಎಂದರೆ ಹೆಡ್ ಆಫ್ ದಿ ಇನ್‌ಸ್ಟಿಟ್ಯೂಷನ್. As said I earlier, we are just working like a post office. They have to go to the Chencellor for his approval. Otherwise there is absolutely no interference whatsoever. The Hon'ble Member Sri Krishnan spoke about ordinances. These are the two things one can see while going deep into the Act. Here also there is no interference. It goes through the Government. We do not want to interfere and we want to maintain the autonomy of the University.

SRI KONANDUR LINGAPPA.—Why should it go through the Government and why should it not directly go to the Chancellor ?

SRI S. M. YAHYA.—Machinery is the Government machinery and it goes through the machinery. I do not want to take much time of the House. These are the amendments which are necessory for clarifying certain matters and which will help to implement the Act smoothly.

MADAM SPEAKER.—The question is :

"That the Karnataka State Universities (Second Amendment) Bill, 1977 be taken into cansideration."

The motion was dpopted

CLAUSES 2 and 3

MADAM SPEAKER.—The Bill will now be considered clause by clause. As there are no amendments to clauses 2 and 3 I will put them to the vote of the House.

The question is :

"That clauses 2 and 3 do stand part of the Bill."

The motion was adopted

CLAUSES 2 and 3 WERE ADDED TO THE BILL.

CLAUSE 4

SRI S. M. YAHYA.—Madam, I beg to move :

"That after sub-clause (1), the following sub-clause shall be inserted, namely :—

"(IA) In clause (22), after the second proviso, the following proviso shall be inserted, namely :—

'Provided also that when representatives of students are elected, the term of office of the students nominated under the preceding proviso shall come to an end.'"

MADAM SPEAKER.—Amendment moved :

"That after sub-clause (1), the following sub-clause shall be inserted, namely :—

(IA) In clause (22), after the second proviso, the following proviso shall be inserted, namely :—

"Provided also when representatives of students are elected, the term of office of the students nominated under the preceding proviso shall come an end.

SRI S. M. YAHYA.—This is necessiated so that the democratic process can go on. A few months ago the Government decided that election should be held to give student representation. The matter was discussed in the other House and the members from both sides were of the opinion that election should not be held because it will be very much delayed and that nomination should be made. In fact, Government wanted to have election and thereby elect student representatives, but the consensus of the other House was that immediately there should be nomination; otherwise, Government will deliberately delay the matter. That is how they put it and Government conveyed the sentiment of the other House to the Vice-Chancellor also Now since the Government want to have the democratic process, we would like that the students should be elected and their representative should take the place of the already nominated persons. This will certainly help to strengthen the democratic trend.

† ಶ್ರೀ ಕೋಣಂದೂರು ಲಿಂಗಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರ ವಿದ್ಯಾ ಸಚಿವರು ವಿದ್ಯಾರ್ಥಿಗಳ ಸೆನೆಟ್ ಮತ್ತು ಸಿಂಡಿಕೇಟ್ ನಾಮಕರಣದ ಮೂಲಕ ಆಯ್ಕೆ ಆಗುವ ಬದಲು ಚುನಾವಣೆ ಮೂಲಕ ಆಯ್ಕೆಯಾಗಬೇಕು ಎಂದು ತಿದ್ದುಪಡಿಯನ್ನು ಏನು ತಂದಿದ್ದಾರೆ ಅದನ್ನು ನಾನು ಸ್ವಾಗತಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತು ಡೆಮಾಕ್ರಟಿಕ್ ಫಂಕ್ಷನ್ ಅದು ಇದು ಎಂದು ಹೇಳಿ ಸದ್ಯ ಚುನಾವಣೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಏನು ಮಾಡುತ್ತಿದ್ದಾರೆ ಇದು ಸ್ವಾಗತಮಾಡತಕ್ಕಂಥ ವಿಷಯ. ಈಗ ಚುನಾವಣೆಯಾದ ನಂತರ ನಾಮಿನೇಟೆಡ್ ಆದಂತಹವರು ಜಾಗವನ್ನು ಖಾಲಿ ಮಾಡುತ್ತಾರೆ ಎಂದರೆ ಯಾವಾಗ ಚುನಾವಣೆಯಾಗುತ್ತದೆ ಎನ್ನುವುದು ಮೂಲ ಪ್ರಶ್ನೆ. ಈ ತಿಂಗಳಲ್ಲೇ ಚುನಾವಣೆಯನ್ನು ಮಾಡುವುದಕ್ಕೆ ಎಲ್ಲಾ ಸಿದ್ಧತೆಯನ್ನು ಮಾಡುವುದಕ್ಕೆ ಏನು ತೊಂದರೆಯಿದೆ ಎಂದು ನಾನು ಕೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಯಾವುದೇ ಚುನಾವಣೆ ಆದರೂ ಕೂಡ, ಚುನಾವಣೆ ಅಂದಕೂಡಲೇ ಅಧಿಕಾರದ ಗದ್ದುಗೆಯುಳ್ಳರತಕ್ಕಂಥಾವರು, ಮಂತ್ರಿ ಮಾನ್ಯರು

ವಿದ್ಯಾರ್ಥಿಗಳು ರಾಜಕೀಯಕ್ಕೆ ಪ್ರವೇಶ ಮಾಡಬಾರದು ಎಂದು ಸಾರಿ ಸಾರಿ ಹೇಳುತ್ತಾರೆ. ಆದರೆ ಇದನ್ನು ನಾನು ಒಪ್ಪಿಕೊಂಡವನಲ್ಲ. ವಿದ್ಯಾರ್ಥಿಗಳು ರಾಜಕಾರಣದಲ್ಲಿ ಆಸಕ್ತಿ ವಹಿಸದೇ ಹೋದರೆ ಮುಂದಿನ ಭವಿಷ್ಯದಲ್ಲಿ ನಾಯಕತ್ವ ವಹಿಸಲಿಕ್ಕೆ ಮಾಸ್ಕೋದಿಂದಾಗಲೀ, ಚೈನಾದಿಂದಾಗಲೀ, ಲಂಡನ್ನಿನಿಂದಾಗಲೀ ನಾಯಕವರ್ಗವನ್ನು ಆಮದುಮಾಡಿಕೊಳ್ಳುವುದಕ್ಕೆ ಆಗುತ್ತದೆಯೇ, ಈಗ ವಿದ್ಯಾರ್ಥಿಗಳಾಗಿರುವವರು ರಾಜಕಾರಣವನ್ನು ತಿಳಿದುಕೊಂಡು ತಮ್ಮದೇ ಆದಂಥ ರಾಜಕೀಯ ಒಲವನ್ನು ದೃಢಪಡಿಸಿಕೊಂಡು, ಒಪ್ಪಿಕೊಂಡು ಈ ರೀತಿ ರಾಜಕೀಯ ಪ್ರಜ್ಞೆಯಿಂದ ಚುನಾವಣೆಗಳಲ್ಲಿ ಭಾಗವಹಿಸತಕ್ಕಂಥಾದ್ದು ಪ್ರಜಾಪ್ರಭುತ್ವವನ್ನು ಬಲಪಡಿಸುವುದರಲ್ಲಿ ಅವಶ್ಯಕವಾದುದು. ಆದರೆ ಅಧಿಕಾರ ಗದ್ದುಗೆಯಲ್ಲಿರತಕ್ಕಂಥಾವರು ವಿದ್ಯಾರ್ಥಿಗಳು ರಾಜಕೀಯಕ್ಕೆ ಪ್ರವೇಶ ಮಾಡಬಾರದು ಎಂದು ಹೇಳುತ್ತಿದ್ದಾರೆ. ಏಕೆಂದರೆ ವಿದ್ಯಾರ್ಥಿಗಳು ರಾಜಕೀಯದಲ್ಲಿ ಆಸಕ್ತಿ ವಹಿಸಿ ಅದರಲ್ಲಿ ಹೋರಾಟ ಮಾಡಲು ಮುಂದೆ ಬಂದರೆ, ನಮ್ಮ ಗದ್ದುಗೆಗೆ ನಮ್ಮ ಕುರ್ಚಿಗೆ ಎಲ್ಲಿ ಕಂಟಕಪ್ರಾಯವಾಗುತ್ತದೋ ಎನ್ನುವ ಸ್ವಾರ್ಥ ಮನೋಭಾವದಿಂದ, ಹೇಳುತ್ತಿದ್ದಾರೆ ಸ್ವಾರ್ಥಿಗಳು, ಪಟ್ಟಭದ್ರ ಹಿತಾಶಕ್ತಿಗಳು ಯಾರಿದ್ದಾರೆ ಅವರು ಮಾತ್ರ ವಿದ್ಯಾರ್ಥಿಗಳು ರಾಜಕೀಯಕ್ಕೆ ಪ್ರವೇಶ ಮಾಡಬಾರದು ಎಂದು ಹೇಳುತ್ತಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನಾನು ಹೇಳುವುದೇನೆಂದರೆ, ವಿದ್ಯಾರ್ಥಿಗಳು ಇವತ್ತು ರಾಜಕೀಯ ಪ್ರಜ್ಞೆಯನ್ನಿಟ್ಟುಕೊಂಡು ಚುನಾವಣೆಯಲ್ಲಿ ಭಾಗವಹಿಸುವುದಕ್ಕೆ ಸರ್ಕಾರ ಪ್ರೋತ್ಸಾಹ ಕೊಡಬೇಕು ಮತ್ತು ನಾವೂ ಕೂಡ ಪ್ರೋತ್ಸಾಹ ಕೊಡುವುದು ಅವಶ್ಯಕವಾದುದು. ಪ್ರತ್ಯಕ್ಷವಾಗಿ ನಾವು ಹೋಗಬಾರದು. ವಿದ್ಯಾರ್ಥಿಗಳಲ್ಲೇ ವಿದ್ಯಾರ್ಥಿ ಕೂಟಗಳನ್ನು ಮಾಡಿಕೊಂಡು ಸ್ಪರ್ಧೆ ಮಾಡಲು ಯಾರ ಅಭ್ಯಂತರವೂ ಇಲ್ಲ ಪಟ್ಟ ಹಿತಾಸಕ್ತಿಗಳು ವಿದ್ಯಾರ್ಥಿಗಳಿಗೆ ರಾಜಕೀಯ ಪ್ರವೇಶಳಾಗಬಾರದು ಎಂದು ನೀತಿ ಬೋಧೆ ಮಾಡಲಿಕ್ಕೆ ಹೋಗದೇ ಇರಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

SRI S. M. YAHYA —There is nothing much to say. Though in the beginning Sri Lingappa was saying something different subsequently he said that the students must not actually involve. That is the view of many of us. ರಾಜಕೀಯ ಪ್ರಜ್ಞೆ ಇರಲೇ ಬೇಕಾಗುತ್ತದೆ. ರಾಜಕೀಯ ಪ್ರಜ್ಞೆ ಯಾರಿಗೂ ಇರಬಾರದೆಂದು ಹೇಳುವುದಕ್ಕೆ ಬರುವುದಿಲ್ಲ. ಆ ರೀತಿ ರಾಜಕೀಯ ಪ್ರಜ್ಞೆ ಇದ್ದರೂ ಡೈರೆಕ್ಟಾಗಿ ಅವರು ಈ ವಿಚಾರದಲ್ಲಿ ಇನ್‌ವಾಲ್ವ್ ಮಾಡಬಾರದು ಎಂದು ಹೇಳಿದರೆ ಅದು ರೀಜನಬಲ್ ಮಾತು ಎಂಬುದಾಗಿ ನನಗೆ ತೋರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ —ಪ್ರೊಫೆಷನಲ್ ರಾಜಕಾರಿಣಿಗಳು ಎಂದು ಅವರು ಹೋಗಬಾರದು, ಆದರೆ ವಿದ್ಯಾರ್ಥಿಗಳು ರಾಜಕೀಯ ದೃಷ್ಟಿಯಿಂದ ಬೇಕಾದರೆ ಹೋರಾಟ ಮಾಡಲಿ.

ಶ್ರೀ ಎಸ್. ಎಂ. ಯಾಹ್ಯಾ —ಎಲ್ಲರಿಗೂ ಅಂತಹ ಒಂದು ಒಳ್ಳೆಯ ಬುದ್ಧಿ ಬಂದರೆ ಒಳ್ಳೆಯದು. ನಾವು ಹೇಳುವುದು ಒಂದು, ಮಾಡುವುದು ಒಂದು ಆದರೆ ಏನು? ಆದರೆ ವಿದ್ಯಾರ್ಥಿಗಳಿಗೆ ರಾಜಕೀಯದಲ್ಲಿ ಪ್ರಜ್ಞೆ ಇರಬೇಕು. ಅನೇಕ ವಿಚಾರಗಳನ್ನು ತಿಳಿದುಕೊಳ್ಳಬೇಕು ಡೈರೆಕ್ಟಾಗಿ ಇನ್ವಾಲ್ವ್ ಆಗಬಾರದೆಂದು ಒಳ್ಳೊಳ್ಳೆಯ, ದೊಡ್ಡ ದೊಡ್ಡ ಎಜುಕೇಷನಿಸ್ಟ್ಸ್ ಹಾಗೂ ಪಾಲಿಟಿಷಿಯನ್ಸ್ ಸಹ ಹೇಳಿದ್ದಾರೆ. ಆದರೂ ವಿದ್ಯಾರ್ಥಿಗಳು ರಾಜಕೀಯ ವ್ಯಕ್ತಿಗಳ ಇನ್‌ಸ್ಟ್ರುಮೆಂಟ್ಸಾಗಿ ಟೂಲ್ಸಾಗಿ ಇರಬಾರದು. ಅವರು ತಮ್ಮದೇ ಆದ ಒಂದು ಇನ್‌ಡಿಪೆಂಡೆಂಟ್ ಸ್ಟೇಟಸ್ಸನು ರಾಜಕೀಯದಲ್ಲಿ ಇಟ್ಟುಕೊಳ್ಳಬೇಕು. ನಿಮ್ಮ ನಮ್ಮ ರಾಜಕೀಯ ವ್ಯಕ್ತಿಗಳ ಕೈಗೊಂಬೆಗಳಾಗಿ ಇರಬಾರದು ಎಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮಂತಹವರು, ನಿಮ್ಮಂತಹವರು ತಪ್ಪು ಮಾಡಿದರೆ ಅವರು ನಮ್ಮನ್ನೂ ನಿಮ್ಮನ್ನೂ ಸರಿಯಾದ ದಾರಿಗೆ ತರುವಂತಹ ವ್ಯಕ್ತಿಗಳಾಗಿರಬೇಕು.

MADAM SPEAKER.—I will put the amendment to the vote of the House. The question is:

"That after sub-clause (1) the following sub-clause sha be inserted, namely.—

"(A) In clause (22), after the second proviso, the following proviso shall be inserted namely.—

Provided also that when representatives of students are elected, the term of office of the students nominated under the preceding proviso shall come to an end.

The Motion was adopted

MADAM SPEAKER.—The question is:

"That Clause 4, as amended, do stand part of the Bill."

The Motion was adopted

Clause 4, as amended, was added to the Bill.

CLAUSES 5 TO 11

MADAM SPEAKER.—The question is:

"That clauses 5 to 11, both inclusive, do stand part of the Bill."

The motion was adopted

Clauses 5 to 11, both inclusive, were added to the Bill

CLAUSE 1, ETC.

MADAM SPEAKER.—The question is:

"That clause 1, the long Title, the Preamble and the Enacting Formula do stand part of the Bill."

The motion was adopted.

Clause 1, the long Title, the Preamble and the Enacting Formula were added to the Bill.

Motion to pass

SRI S. M. YAHYA.—I move.—

"That the Karnataka State Universities (Second Amendment) Bill, 1977, as amended be passed."

MADAM SPEAKER.—The question is:

"That the Karnataka State Universities (Second Amendment) Bill, 1977, as amended be passed."

The motion was adopted and the Bill as amended was passed.

MADAM SPEAKER.—The House will now adjourn for half an hour.

The House adjourned at Fifteen Minutes past Four of the Clock and reassembled at Fifty Three minutes past Four of the clock.